# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಹಾಗೂ ವಿಶೇಷ ನ್ಯಾಯಾಧೀಶರು (ಎನ್.ಡಿ.ಪಿ.ಎಸ್), ದಾವಣಗೆರೆ.</u>

## <u>ವಿಶೇಷ ಪ್ರಕರಣ (ಎನ್‌ಡಿಪಿಎಸ್) ಸಂಖ್ಯೆ: 8/2020</u>

<u>ಫಿರ್ಯಾದುದಾರರು</u>: ಕರ್ನಾಟಕ ಸರ್ಕಾರದ ಪರವಾಗಿ,
ಕೆ.ಟಿ.ಜೆ. ನಗರ ಪೊಲೀಸ್ ಠಾಣೆ.

-ವಿರುದ್ಧ-

<u>2 ನೇ ಆರೋಪಿ</u> : ಸತೀಶ್ ಬಾಬುರಾವ್ ಜಂಬಳೆ ತಂದೆ ಬಾಬುರಾವ್ ಜಾಂಬಳೆ,
ವಯಸ್ಸುಃ 45 ವರ್ಷ, ಉದ್ಯೋಗಃ ಕೂಲಿ ಕೆಲಸ,
ವಾಸಃ ಕ್ಯಾಳಗೊಂಡ ಗ್ರಾಮ, ಶಿಗ್ಗಾವ್ ತಾಲ್ಲೂಕು,
ದಾವಣಗೆರೆ ಜಿಲ್ಲೆ.

- - - -

<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>

ಪ್ರಶ್ನೆ1: ಅಭಿಯೋಗದವರು 10 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದು, ಅವರ ನುಡಿ ಸಾಕ್ಷ್ಯವನ್ನು ಕೇಳಿರುವಿರಾ?

ಉತ್ತರಃ-

ಪ್ರಶ್ನೆ2: ಫ್ರಾಸಾ-1 ಮುಸ್ತಾಖ್ ಅಹಮದ್, ಪಿಐ ಲೋಕಾಯುಕ್ತ ಪೋಲೀಸ್, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ದಿನಾಂಕ 26.12.2019 ರಂದು ಬೆಳಿಗ್ಗೆ 10.00 ತಾನು ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ ಇರುವಾಗ ತನಗೆ ಬಾತ್ಮೀದಾರರಿಂದ ದಾವಣಗೆರೆ ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹಿಂಭಾಗದ ಗಣೇಶ್ ಲೇ ಔಟ್ ನ 2 ನೇ ಕ್ರಾಸಿನ ರಸ್ತೆಯಲ್ಲಿ 2-3 ಜನ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿತ್ತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ3: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ತಾನು ಈ ಬಗ್ಗೆ ದಾಳಿ ಮಾಡಿ, ಕಾನೂನು ರೀತ್ಯ ಕ್ರಮ ಜರುಗಿಸಲು ಅನುಮತಿ ನೀಡುವಂತೆ ಮಾನ್ಯ ಪೋಲೀಸ್ ಅಧೀಕ್ಷಕರು ದಾವಣಗೆರೆ ರವರಿಗೆ ನಿಪಿ.1 ರಂತೆ ಪತ್ರ ಬರೆದು ಅನುಮತಿ ಪಡೆದುಕೊಂಡೆನು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ4: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಈ ಬಗ್ಗೆ ದೂರು ತಯಾರಿಸಿ, ಪ್ರಕರಣವನ್ನು ದಾಖಲಿಸುವಂತೆ ಠಾಣಾಧಿಕಾರಿ ಕೆ.ಟಿ.ಜೆ. ನಗರ ಇವರಿಗೆ ದೂರು ನೀಡಿರುತ್ತೇನೆಂದು, ಠಾಣಾಧಿಕಾರಿ ಕೆ.ಟಿ.ಜೆ. ನಗರ ಇವರು ತಮ್ಮ ಠಾಣಾ ಗುನ್ನೆ ನಂ.216/2019 ರಲ್ಲಿ ನಿಪಿ.3 ರಂತೆ ದೂರು ದಾಖಲಿಸಿಕೊಂಡರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ5: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅಧೀಕ್ಷಕರು, ಚಿಗಟೇರಿ ಜಿಲ್ಲಾ ಆಸ್ಪತ್ರೆ ದಾವಣಗೆರೆ ಇವರಿಗೆ ಇಬ್ಬರು ಪಂಚರು ಮತ್ತು ಒಬ್ಬರು ಪತ್ರಾಂಕಿತ ಅಧಿಕಾರಿಯನ್ನು ಕಳುಹಿಸುವಂತೆ ನಿಪಿ.4 ರಂತೆ ಪತ್ರ ಬರೆದಿರುತ್ತೇನೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ6: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಿಗಟೇರಿ ಜಿಲ್ಲಾ ಆಸ್ಪತ್ರೆಯ

ಅಧೀಕ್ಷಕರು ಚಾಸಾ.2 ನಾಗರಾಜ ಮತ್ತು ಚಾಸಾ.3 ವಿರೇಶ್ ರವರನ್ನು ಪಂಚರನ್ನಾಗಿ ಹಾಗೂ ಚಾಸಾ.4 ಮಾರುತಿ ರವರನ್ನು ಪತ್ರಾಂಕಿತ ಅಧಿಕಾರಿಯಾಗಿ ನಿಪಿ.5 ರ ಜ್ಞಾಪನಾ ಪತ್ರದೊಂದಿಗೆ ಕಳುಹಿಸಿಕೊಟ್ಟರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ7: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ.2 ನಾಗರಾಜ, ಚಾಸಾ.3 ವಿರೇಶ್ ಮತ್ತು ಚಾಸಾ.4 ಮಾರುತಿ ರವರು ಸಿ.ಇ.ಎನ್. ಪೋಲೀಸ್ ಠಾಣೆಗೆ ಅದೇ ದಿನ ಅಂದರೆ ದಿನಾಂಕ 26.12.2019 ರಂದು ಮಧ್ಯಾಹ್ನ 12.00 ಗಂಟೆಗೆ ಬಂದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ8: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ.2 ನಾಗರಾಜ, ಚಾಸಾ.3 ವಿರೇಶ್ ಮತ್ತು ಚಾಸಾ.4 ಮಾರುತಿ ರವರಿಗೆ ಮತ್ತು ತಮ್ಮ ಸಿಬ್ಬಂದಿಗಳಾದ ಚಾಸಾ.9 ನಾಗರಾಜ, ಚಾಸಾ.10 ಮಂಜುನಾಥ, ಚಾಸಾ.11 ಲೋಹಿತ್, ಚಾಸಾ.12 ನಾಗರಾಜ, ಚಾಸಾ.13 ಕೊಟ್ರೇಶ್, ಚಾಸಾ.14 ರವಿ, ಚಾಸಾ.15 ದ್ಯಾಮೇಶ್ ಮತ್ತು ಚಾಸಾ.16 ದೇವರಾಜ ರವರುಗಳಿಗೆ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ವಿಷಯನ್ನು ತಿಳಿಸಿ, ಈ ಬಗ್ಗೆ ದಾಳಿ ಮಾಡಬೇಕಾಗಿದ್ದು, ಸ್ಥಳದಲ್ಲಿ ಹಾಜರಿದ್ದು, ದಾಳಿಗೆ ಸಹಕರಿಸುವಂತೆ ತಿಳಿಸಿ, ಚಾಸಾ.2 ನಾಗರಾಜ ಮತ್ತು ಚಾಸಾ.3 ವಿರೇಶ್ ರವರಿಗೆ ನಿಪಿ.6 ರಂತೆ ನೋಟೀಸು ಜಾರಿ ಮಾಡಿರುತ್ತೇನೆಂದು, ಚಾಸಾ.2 ನಾಗರಾಜ, ಚಾಸಾ.3 ವಿರೇಶ್ ಮತ್ತು ಚಾಸಾ.4 ಮಾರುತಿ ರವರು ದಾಳಿಗೆ ಸಹಕರಿಸಲು ಒಪ್ಪಿಕೊಂಡಿರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ9: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ದಾಳಿಗೆ ಹೋಗಲು ಅವಶ್ಯವಿರುವ ಉಪಕರಣಗಳಾದ ಲ್ಯಾಪ್ ಟಾಪ್, ಪ್ರಿಂಟರ್, ವಿದ್ಯುತ್ ಚಾಲಿತ ತೂಕದ ಯಂತ್ರ, ಒಂದು ಹ್ಯಾಂಡಿ ಕ್ಯಾಮೆರಾ ಹಾಗೂ ತನಿಖಾಧಿಕಾರಿ ಕಿಟ್ ನ್ನು ತೆಗೆದುಕೊಂಡು ತಮ್ಮ ಠಾಣೆಯ ಸರಕಾರಿ ವಾಹನದಲ್ಲಿ ಚಾಸಾ.2 ನಾಗರಾಜ, ಚಾಸಾ.3 ವಿರೇಶ್ ಮತ್ತು ಚಾಸಾ.4 ಮಾರುತಿ, ಚಾಸಾ.14 ರವಿ, ಚಾಸಾ.15 ದ್ಯಾಮೇಶ್ ಮತ್ತು ಚಾಸಾ.16 ದೇವರಾಜ ರವರುಗಳೊಂದಿಗೆ ಹಾಗೂ ಬೈಕುಗಳಲ್ಲಿ ಬೇರೆ ಸಿಬ್ಬಂದಿಗಳಾದ ಚಾಸಾ.9 ನಾಗರಾಜ, ಚಾಸಾ.10 ಮಂಜುನಾಥ, ಚಾಸಾ.11 ಲೋಹಿತ್, ಚಾಸಾ.12 ನಾಗರಾಜ ಮತ್ತು ಚಾಸಾ.13 ಕೊಟ್ರೇಶ್ ರವರು ಮಾಹಿತಿ ಬಂದ ಸ್ಥಳಕ್ಕೆ ಹೋಗಲು 12.15 ಗಂಟೆಗೆ ಠಾಣೆಯನ್ನು ಬಿಟ್ಟೆವು, ಸ್ಥಳ ತಲುಪಿದಾಗ 12.30 ಗಂಟೆ ಆಗಿತ್ತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ10: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಮಾಹಿತಿ ಬಂದ ಸ್ಥಳದಿಂದ ಸುಮಾರು 200 ಅಡಿ ದೂರದಲ್ಲಿ ಇಲಾಖಾ ವಾಹನವನ್ನು ಮರೆಯಲ್ಲಿ ನಿಲ್ಲಿಸಿ, ವಾಹನದಿಂದ ಕೆಳಕ್ಕೆ ಇಳಿದು, ತಾನು, ಪಂಚರು ಮತ್ತು ಸಿಬ್ಬಂದಿಗಳೆಲ್ಲರೂ ಪರಸ್ಪರ ಅಂಗಶೋಧನೆ ಮಾಡಿಕೊಂಡು, ತಮ್ಮಗಳ ಬಳಿ ಗಾಂಜಾ ಇಲ್ಲದಿರುವುದನ್ನು ಖಚಿತಪಡಿಸಿಕೊಂಡೆವು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ11: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಜಾಲಿ ಗಿಡಗಳ ಮರೆಯಿಂದ ಗಣೇಶ್ ಲೇ ಔಟ್ ನ 2 ನೇ ಕ್ರಾಸಿನ ಕಡೆ ನೋಡಲಾಗಿ, ಅಲ್ಲಿ ಮೂರು ಜನ ನಿಂತಿದ್ದರು ಎಂದು, ಆ ಪೈಕಿ ಇಬ್ಬರ ಕೈಯಲ್ಲಿ ಒಂ ದು ಕೆಂಪು ಬಣ್ಣ ಕೈ ಚೀಲ ಮತ್ತು ಹಳದಿ ಮತ್ತು ಕೆಂಪು ಬಣ್ಣದ ಕೈ ಚೀಲಗಳನ್ನು ಹಿಡಿದುಕೊಂಡು ನಿಂತಿದ್ದು, ಗಿರಾಕಿಗಳಿಗಾಗಿ ಕಾಯುತ್ತಿರುವುದು ಕಂಡು ಬಂತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು

ಹೇಳುತ್ತೀರಿ?

ಉತ್ತರಃ

ಪ್ರಶ್ನೆ 12: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅವರು ಗಾಂಜಾ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಚಾಸಾ.13 ಕೊಟ್ರೇಶ್ ರವರಿಗೆ ರೂ.100/-ರ ಮುಖ ಬೆಲೆಯ ಐದು ನೋಟುಗಳನ್ನು ನೀಡಿ, ಅಲ್ಲಿ ನಿಂತ ವ್ಯಕ್ತಿಗಳಿಂದ ಗಾಂಜಾ ಖರೀದಿ ಮಾಡಿಕೊಂಡು ಬರುವಂತೆ ತಿಳಿಸಿ, ಕಳುಹಿಸಿದೆವು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 13: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ.13 ಕೊಟ್ರೇಶ್ ರವರು ಆ ವ್ಯಕ್ತಿಗಳಿಂದ ಗಾಂಜಾ ಖರೀದಿ ಮಾಡಿಕೊಂಡು ಗಾಂಜಾ ಇರುವ ಎರಡು ಸಣ್ಣ ಪಾಲಿಥಿನ್ ಕವರುಗಳನ್ನು ತೆಗೆದುಕೊಂಡು ಬಂದರು ಎಂದು, ಅವುಗಳನ್ನು ತಲಾ 200 ರೂಪಾಯಿಗಳಂತೆ ಖರೀದಿ ಮಾಡಿರುವುದಾಗಿ ಹೇಳಿ, 100 ರೂಪಾಯಿ ವಾಪಸು ನೀಡಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 14: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಎರಡು ಪಾಲಿಥಿನ್ ಕವರುಗಳಲ್ಲಿರುವ ವಸ್ತುವನ್ನು ಪರಿಶೀಲಿಸಿದಾಗ, ಅದರಲ್ಲಿ ಅರೆಬರೆ ಒಣಗಿದ ಹೂ, ಮೊಗ್ಗು, ಬೀಜ ಇರುವ ಸೊಪ್ಪು ಇದ್ದು, ಅದರಿಂದ ಘಾಟು ವಾಸನೆ ಬರುತ್ತಿತ್ತು ಎಂದು, ಇದರಿಂದಾಗಿ ಇದು ಗಾಂಜಾ ಎಂದು ಖಚಿತವಾಯಿತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ15: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಸದರಿ ವ್ಯಕ್ತಿಗಳನ್ನು ಹಿಡಿದುಕೊಳ್ಳಲು ಸಿಬ್ಬಂದಿ ಮತ್ತು ತಾವುಗಳು ಸೇರಿ ಸದರಿ ವ್ಯಕ್ತಿಗಳನ್ನು ಸುತ್ತುವರಿದು ಹಿಡಿದುಕೊಳ್ಳಲು ಹೋದೆವು ಎಂದು, ಸದರಿ ವ್ಯಕ್ತಿಗಳು ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ಸುತ್ತುವರಿದು ಹಿಡಿದುಕೊಂಡೆವು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ16: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಅವರ ಹೆಸರು ಮತ್ತು ವಿಳಾಸವನ್ನು ಪಂಚರ ಸಮಕ್ಷಮ ಕೇಳಲಾಗಿ, ಅವರಲ್ಲಿ ಒಬ್ಬ ರೇವಣಸಿದ್ದಪ್ಪ ತಂದೆ ಬಸಪ್ಪ (ಆರೋಪಿ-1), ಇನ್ನೊಬ್ಬ ವ್ಯಕ್ತಿ ಸತೀಶ್ ಬಾಬುರಾವ್ ಜಂಬಾಳೆ (ಆರೋಪಿ-2), ಇನ್ನೊಬ್ಬ ಲೋಕೇಶ್ ತಂದೆ ಬಸಪ್ಪ (ಆರೋಪಿ-3) ಎಂದು ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ17: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಅವರನ್ನು ತಾನು ಪಂಚರ ಸಮಕ್ಷಮ ವಿಚಾರಿಸಿದಾಗ ಅವರು ತಾವು ಕೂಲಿ ಕೆಲಸ ಮಾಡುತ್ತಿದ್ದು, ಅದರಿಂದ ಐಶಾರಾಮಿ ಜೀವನ ಮಾಡಲು ಸಾಧ್ಯವಾಗುತ್ತಿಲ್ಲ, ಹೆಚ್ಚಿನ ಹಣವನ್ನು ಮೂರು ಜನ ಸೇರಿ ಗಾಂಜಾ ಮಾರಾಟ ಮಾಡಿ ಗಳಿಸೋಣ ಎಂದು ಚರ್ಚಿಸಿ, ಮೂರು ಜನ ಹಾವೇರಿ ಜಿಲ್ಲೆಯ ಸಂತ ಶಿಶುನಾಳ ಗ್ರಾಮದ ಪಕ್ಕೀರ್ ಒಬ್ಬರಿಂದ ಗಾಂಜಾ ಖರೀದಿಸಿ ಬಂದು, ದಾವಣಗೆರೆಯಲ್ಲಿ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ18: ಪ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಚಾಸಾ.13 ಕೊಟ್ರೇಶ್ ರವರು ಮೂರು ಜನರ ಪೈಕಿ 1 ನೇ ಆರೋಪಿತನನ್ನು ತೋರಿಸಿ, ತಾನು ಇವರಿಂದ ಗಾಂಜಾ ಇರುವ ಪಾಲಿಥಿನ್ ಕವರುಗಳನ್ನು ಖರೀದಿ ಮಾಡಿರುವುದಾಗಿ ತಿಳಿಸಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ19: ಪ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 1 ನೇ ಆರೋಪಿ ಕೈಯಲ್ಲಿದ್ದ ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಹಳದಿ ಮತ್ತು ಕೆಂಪು ಬಣ್ಣದ ಬಟ್ಟೆ ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ, ಅದರಲ್ಲಿ ಗಾಂಜಾ ಇದೆ ಎಂದು ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ20: ಪ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಚೀಲವನ್ನು ಪಂಚರ ಸಮಕ್ಷಮ ಮತ್ತು ಇತರೆ ಸಿಬ್ಬಂದಿಗಳ ಸಮಕ್ಷಮ ಪಡೆದು ಪರಿಶೀಲಿಸಿದಾಗ, 32 ಬಿಳಿ ಬಣ್ಣ ಪಾಲಿಥಿನ್ ಕವರುಗಳಿದ್ದು, ಅವುಗಳಿಂದ ಗಾಂಜಾದ ಘಾಟು ವಾಸನೆ ಬರುತ್ತಿದ್ದು, ಅದರಲ್ಲಿ ಅರೆಬರೆ ಒಣಗಿದ ಹೂ, ಮೊಗ್ಗು, ಬೀಜ ಮತ್ತು ಸೊಪ್ಪು ಇದ್ದು, ಇದರ ವಾಸನೆಯಿಂದ ಇದು ಗಾಂಜಾ ಎಂದು ತಿಳಿದು ಬಂತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ21: ಪ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಚಾಸಾ.13 ಕೊಟ್ರೇಶ್ ರವರು 1 ನೇ ಆರೋಪಿಯಿಂದ ಖರೀದಿ ಮಾಡಿರುವ ಗಾಂಜಾ ಇರುವ ಎರಡು ಪಾಲಿಥಿನ್ ಕವರುಗಳನ್ನು 1 ನೇ ಆರೋಪಿತ ಕೈ ಚೀಲದಲ್ಲಿ ಇದ್ದಂತಹ ಪಾಲಿಥಿನ್

ಕವರುಗಳೊಂದಿಗೆ ಹೋಲಿಸಿ ನೋಡಿದಾಗ, ಅವು ಒಂದಕ್ಕೊಂದು ತಾಳೆಯಾದೆವು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ22: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 2 ನೇ ಆರೋಪಿತನ ಕೈಯಲ್ಲಿ ಕೆಂಪು ಬಣ್ಣದ ಬಟ್ಟೆ ಚೀಲವಿದ್ದು, ಅದರಲ್ಲಿ ಏನು ಇದೆ ಎಂದು ಕೇಳಿದಾಗ, ಅವರು ಗಾಂಜಾ ಇರುವುದಾಗಿ ತಿಳಿಸಿದಾಗ, ಅದನ್ನು ಪಡೆದು ಪಂಚರ ಸಮಕ್ಷಮ ಪರಿಶೀಲಸಲಾಗಿ, ಕೆಂಪು ಚೀಲದ ಒಳಗೆ ಒಂದು ಕಪ್ಪು ಬಣ್ಣ ಪ್ಲಾಸ್ಟಿಕ್ ಕವರಿದ್ದು, ಅದರಿಂದ ಘಾಟು ವಾಸನೆ ಬರುತ್ತಿದ್ದು, ಅದರಲ್ಲಿ ಅರೆಬರೆ ಒಣಗಿದ ಹೂ, ಮೊಗ್ಗು, ಬೀಜ ಮತ್ತು ಸೊಪ್ಪು ಇದ್ದು, ಅದರ ವಾಸನೆಯಿಂದ ಅದು ಗಾಂಜಾ ಸೊಪ್ಪು ಎಂದು ತಿಳಿದು ಬಂತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 1 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಉತ್ತರಃ

ಪ್ರಶ್ನೆ23: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ16 ದೇವರಾಜ ರವರ ಮೂಲಕ ತೂಕದ ಯಂತ್ರದಿಂದ, 1 ನೇ ಆರೋಪಿ ಬಳಿ ಇದ್ದಂತಹ 32 ಪ್ಲಾಸ್ಟಿಕ್ ಕವರುಗಳಲ್ಲಿ ಇರುವ ಗಾಂಜಾವನ್ನು ತೂಕ ಮಾಡಲಾಗಿ, ಅದು ಒಟ್ಟು 218 ಗ್ರಾಂ ಗಾಂಜಾ ಇತ್ತು ಎಂದು, ಅದನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ, ಅರಗಿನಿಂದ ಡಿಸಿಬಿ ಎಂದು ಸೀಲ್ ಮಾಡಲಾಯಿತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ24: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ 2 ನೇ ಆರೋಪಿಯ ಬಳಿ ಕಪ್ಪು ಬಣ್ಣ ಪ್ಲಾಸ್ಟಿಕ್ ಕವರಿನಲ್ಲಿ ಇದ್ದ ಗಾಂಜಾವನ್ನು ತೂಕ ಮಾಡಲಾಗಿ, ಅದು ಒಟ್ಟು 780 ಗ್ರಾಂ ಇದ್ದು, ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ, ಅರಗಿನಿಂದ ಡಿಸಿಬಿ ಎಂದು ಸೀಲ್ ಮಾಡಲಾಯಿತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು

ಹೇಳುತ್ತೀರಿ?

ಈ ಪ್ರಶ್ನೆ 1 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಉತ್ತರಃ

ಪ್ರಶ್ನೆ25: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಸಿಬ್ಬಂದಿಯಾದ ಚಾಸಾ.13 ಕೊಟ್ರೇಶ್ ರವರು 1 ನೇ ಆರೋಪಿಯಿಂದ ಖರೀದಿ ಮಾಡಿ ತಂದಿರುವ ಗಾಂಜಾ ಇರುವ ಎರಡು ಪ್ಲಾಸ್ಟಿಕ್ ಕವರುಗಳನ್ನು ತೂಕ ಮಾಡಲಾಗಿ, ಅದರಲ್ಲಿ 12 ಗ್ರಾಂ ಗಾಂಜಾ ಇದ್ದು, ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ, ಅರಗಿನಿಂದ ಡಿಸಿಬಿ ಎಂದು ಸೀಲ್ ಮಾಡಲಾಯಿತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ26: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಮೂರು ಜನ ಆರೋಪಿತರಿಗೆ ಅವರ ಬಳಿ ಗಾಂಜಾ, ಗಾಂಜಾ ಮಾರಾಟ ಮಾಡಿದ ಹಣ ಇರುವ ಬಗ್ಗೆ ಅಂಗಶೋಧನೆ ಮಾಡಬೇಕಾಗಿದ್ದು, ಅಂಗಶೋಧನೆಯನ್ನು ಪತ್ರಾಂಕಿತ ಅಧಿಕಾರಿ ಮಾಡಬೇಕೋ ? ಅಥವಾ ತಾನು ಮಾಡಬೇಕೋ ಎಂಬ ಬಗ್ಗೆ ಆರೋಪಿತರಿಗೆ ನಿಪಿ.7 ರಿಂದ ನಿಪಿ.9 ರಂತೆ ನೋಟೀಸು ನೀಡಿದ್ದು, ಅವರು ಪತ್ರಾಂಕಿತ ಅಧಿಕಾರಿಯವರು ಅಂಗಶೋಧನೆ ಮಾಡಲು ಒಪ್ಪಿಕೊಂಡರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ27: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಚಾಸಾ.4 ಮಾರುತಿ ರವರು 1 ನೇ ಆರೋಪಿತನನ್ನು ಅಂಗಶೋಧನೆ ಮಾಡಿದಾಗ, 1 ನೇ ಆರೋಪಿಯ ಅಂಗಿಯ ಎದೆ ಜೇಬಿನಲ್ಲಿ 100 ರೂಪಾಯಿ ಮುಖ ಬೆಲೆಯ 10 ನೋಟುಗಳು

ದೊರೆತವು ಎಂದು, ಇವುಗಳ ಬಗ್ಗೆ ಕೇಳಲಾಗಿ, ಈ ಹಣ ಗಾಂಜಾ ಮಾರಾಟದಿಂದ ಬಂದ ಹಣ ಎಂದು ತಿಳಿಸಿರುತ್ತಾರೆಂದು, ಅದನ್ನು ಮುಂದಿನ ಕ್ರಮಕ್ಕೆ ವಶಪಡಿಸಿಕೊಳ್ಳಲಾಯಿತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ 28: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ 1 ನೇ ಆರೋಪಿಯು ಬಳಸಿದ್ದ ಮಾರುತಿ ಟೆಕ್ಸಟೈಲ್ ಎಂದು ಹೆಸರು ಇರುವ ಹಳದಿ ಮತ್ತ ಕೆಂಪು ಬಣ್ಣದ ಕೈ ಚೀಲವನ್ನು ಹಾಗೂ 2 ನೇ ಆರೋಪಿಯು ಬಳಸಿದ್ದ ಕೆಂಪು ಬಣ್ಣದ ಕೈ ಚೀಲವನ್ನು ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದುಕೊಂಡೆವು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 3 ನೇ ಆರೋಪಿತನಿಗೆ ಸಂಬಂಧಿಸಿರುವುದಿಲ್ಲ.

ಉತ್ತರಃ

ಪ್ರಶ್ನೆ 29: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಮೇಲೆ ಹೇಳಿದ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ಮಧ್ಯಾಹ್ನ 12.40 ರಿಂದ 2.30 ರವರೆಗೆ ನಿಪಿ.10 ರಂತೆ ಪಂಚನಾಮೆಯನ್ನು ಚಾಸಾ.15 ದ್ಯಾಮೇಶ್ ರವರ ಮೂಲಕ ಟೈಪ್ ಮಾಡಿಸಿ, ಪ್ರಿಂಟ್ ತೆಗೆಯಲಾಯಿತು ಎಂದು, ಸದರಿ ಪಂಚನಾಮೆಗೆ ತಾನು, ತಮ್ಮ ಸಿಬ್ಬಂದಿಗಳು, ಪಂಚರು, ಪತ್ರಾಂಕಿತ ಅಧಿಕಾರಿ ಮತ್ತು ಆರೋಪಿತರು ಸಹಿ ಮಾಡಿರುತ್ತೇವೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 30: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಿಪಿ.10 ರ ಪಂಚನಾಮೆ ಪ್ರಕ್ರಿಯೆಗಳ ಬಗ್ಗೆ ಚಾಸಾ.16 ದೇವರಾಜ ರವರು ಹ್ಯಾಂಡಿ ಕ್ಯಾಮೆರಾದಲ್ಲಿ ನಿಪಿ.11 ರಿಂದ ನಿಪಿ.21 ರಂತೆ ಒಟ್ಟು 11 ಪೋಟೋಗಳನ್ನು ತೆಗೆದಿರುತ್ತಾರೆಂದು, ಸದರಿ ಪೋಟೋಗಳಲ್ಲಿ

ಆರೋಪಿತರು, ಪಂಚರು, ಪತ್ರಾಂಕಿತ ಅಧಿಕಾರಿ ಮತ್ತು ಸಿಬ್ಬಂದಿ ಇರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ31: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿತರು ಮತ್ತು ಜಪ್ತಿ ಮಾಡಿಕೊಂಡ ಮಾಲುಗಳೊಂದಿಗೆ ಕೆ.ಟಿ.ಜಿ.ನಗರ ಪೋಲೀಸ್ ಠಾಣೆಗೆ ಬಂದು ಠಾಣಾಧಿಕಾರಿಯ ಮುಂದೆ ಮುಂದಿನ ಕ್ರಮಕ್ಕಾಗಿ ನಿಪಿ.22ರ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ32: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅಮಾನತ್ತುಪಡಿಸಿಕೊಳ್ಳಲಾದ 12 ಗ್ರಾಂ ಗಾಂಜಾ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ, ಸೀಲ್ ಮಾಡಲಾದ ಎಂ.ಓ.1 ಎಂದು ಗುರುತಿಸಲಾದ ಪ್ಯಾಕನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ33: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 1ನೇ ಆರೋಪಿಯ ಅಂಗಶೋಧನೆಯಲ್ಲಿ ದೊರೆತ ಎಂ.ಓ.2 ಎಂದು ಗುರುತಿಸಲಾದ ರೂ.1000/- ನಗದು ಹಣ ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ34: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಹಳದಿ ಮತ್ತು ಕೆಂಪು ಬಣ್ಣದ ಬಟ್ಟೆಯ ಕೈ ಚೀಲ ಎಂ.ಓ.3 ಎಂದು, 2 ನೇ ಆರೋಪಿಯ ಬಳಿ ಇದ್ದ ಕೆಂಪ್ವು ಬಣ್ಣದ ಬಟ್ಟೆಯ ಕೈ ಚೀಲವನ್ನು ಎಂ.ಓ.4 ಎಂದು ಇರುತ್ತದೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ35: ಫ್ರಾಸಾ-2 ವಿರೇಶ್ ಎನ್ ವಿ, ಪ್ರಥಮ ದರ್ಜೆ ಸಹಾಯಕ, ಸಿ ಜೆ ಆಸ್ಪತ್ರೆ, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ದಿನಾಂಕ 26.12.2019 ರಂದು ಸಿಜೆ ಆಸ್ಪತ್ರೆಯಿಂದ ತನಗೆ ಸಿಎನ್ ಪೋಲೀಸ್ ಠಾಣೆಗೆ ಹೋಗುವಂತೆ ತಮ್ಮ ಅಧೀಕ್ಷಕರು ತನ್ನನ್ನು ನಿಯೋಜನೆ ಮಾಡಿದ್ದರು ಎಂದು, ತನ್ನೊಂದಿಗೆ ಚಾಸಾ.2 ನಾಗರಾಜ, ಚಾಸಾ.3 ವಿರೇಶ್ ಮತ್ತು ಚಾಸಾ.4 ಮಾರುತಿ ರವರನ್ನು ಸಹ ನಿಯೋ೯ಗಿಸಿದ್ದರು ಎಂದು, ತಮ್ಮನ್ನು ನಿಯೋಜನೆ ಮಾಡುವ ಸಂದರ್ಭದಲ್ಲಿ ಒಂದು ದಾಳಿ ಮಾಡಬೇಕಾಗಿದೆ ಬರುವಂತೆ ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ36: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ತಾವು ಸಿಎನ್ ಠಾಣೆಗೆ ಹೊದೆವು ಎಂದು, ಆಗ ಮಧ್ಯಾಹ್ನ 12.00 ಗಂಟೆಯಾಗಿತ್ತು ಎಂದು, ಚಾಸಾ.1 ಮುಸ್ತಾಕಅಹಮ್ಮದ್ ರವರು ತಮಗೆ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಅಲ್ಲಿ ದಾಳಿ ಮಾಡಬೇಕೆಂದು ತಿಳಿಸಿ ತಮಗೆ ನಿಪಿ.6 ರಂತೆ ನೋಟೀಸ್ ನೀಡಿದ್ದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ37: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಇಲಾಖಾ ಜೀಪಿನಲ್ಲಿ ಪೋಲೀಸರು ತನ್ನನ್ನು ಚಾಸಾ.2 ನಾಗರಾಜ, ಚಾಸಾ.3 ವಿರೇಶ್ ಮತ್ತು ಚಾಸಾ.4 ಮಾರುತಿ ರವನ್ನು ಕರೆದುಕೊಂಡು ಹೋದರು ಎಂದು, ತಮ್ಮ ಹಿಂದಿನಿಂದ ಇನ್ನು 4 ಜನ ಪೋಲೀಸರು ಬೈಕ್ ನಲ್ಲಿ ಬಂದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ38: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ತಮ್ಮನ್ನು ಹೊಸ ಬಸ್ ನಿಲ್ದಾಣದ ಹಿಂಭಾಗದಲ್ಲಿ ಅಶೋಕ ಹೋಟೆಲ್, 2 ನೇ ಕ್ರಾಸ್ ಗಣೇಶ್ ಲೇಜೌಟ್ ಗೆ ಕರೆದುಕೊಂಡು ಹೋದರು ಎಂದು, ಜೀಪನ್ನು ಒಂದು ಜಾಲಿ ಮರದ ಹತ್ತಿರ ನಿಲ್ಲಿಸಿ, ಸ್ವಲ್ಪ ಕಾಲದವರೆಗೆ ಅಲ್ಲಿಯೇ ಕಾಯುತ್ತಿದ್ದಾಗ, ಅಲ್ಲಿ ಅನುಮಾನಸ್ಪದವಾಗಿ ಮೂರು ಜನ ನಿಂತಿದ್ದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ39: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಮೂರು ಜನರ ಪೈಕಿ ಇಬ್ಬರ ಕೈಯಲ್ಲಿ ಕೈ ಚೀಲಗಳು ಇದ್ದವು ಎಂದು, ಒಂದು ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಹಳದಿ ಮತ್ತು ಕೆಂಪು ಮಿಶ್ರಿತ ಕೈ ಚೀಲ ಮತ್ತು ಇನ್ನೊಂದು ಕೆಂಪು ಕೈ ಚೀಲ ಇದ್ದವು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ40: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅವರ ಮೇಲೆ ಚಾಸಾ.1 ಮುಸ್ತಾಕಅಹಮ್ಮದ್ ರವರಿಗೆ ಅನುಮಾನ ಬಂದು ಚಾಸಾ.13 ಕೊಟ್ರೇಶ್ ರವರ ಮೂಲಕ ರೂ.500/- ಗಳನ್ನು (ರೂ.100/- ನ ಐದು ನೋಟುಗಳು) ಕೊಟ್ಟು, ಆ ವ್ಯಕ್ತಿಗಳು ಯಾವುದೋ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆಂದು, ಸದರಿ ವಸ್ತುವನ್ನು

ಕೊಂಡುಕೊಂಡು ಬರುವಂತೆ ಕಳುಹಿಸಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ41: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ.13 ಕೊಟ್ರೇಶ್ ರವರು ಸದರಿ ವ್ಯಕ್ತಿಗಳ ಬಳಿ ಹೋಗಿ ಎರಡು ಪ್ಯಾಕೇಟ್ ಗಳನ್ನು ಖರೀದಿಸಿ ತಂದರು ಎಂದು, ಸದರಿ ಪ್ಯಾಕೇಟ್ ಗಳು ಪಾಲಿಥಿನ್ ಕವರ್ ಗಳು ಎಂದು, ಸದರಿ ಪ್ಯಾಕೇಟಗಳನ್ನು ತೆರೆದು ನೋಡಲಾಗಿ, ಅದರಲ್ಲಿ ಒಣಗಿದ ಹಸಿರು ಬಣ್ಣದ ಸೊಪ್ಪು ಮತ್ತು ಮೊಗ್ಗು ಇದ್ದವು ಎಂದು, ಸದರಿ ಸೊಪ್ಪು ಗಾಂಜಾ ಸೊಪ್ಪು ಎಂದು ಚಾಸಾ.1 ಮುಸ್ತಾಕಅಹಮ್ಮದ್ ರವರು ಅಭಿಫ್ರಾಯ ಪಟ್ಟರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ42: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿದ್ದರು ಎಂದು, ಚಾಸಾ.13 ಕೊಟ್ರೇಶ್ ರವರು ರೂ.100/- ಅನ್ನು ಚಾಸಾ.1 ಮುಸ್ತಾಕಅಹಮ್ಮದ್ ರವರಿಗೆ ವಾಪಾಸ್ ಕೊಟ್ಟರು ಎಂದು, ನಂತರ ಪೋಲೀಸರು ಸದರಿ ಮೂರು ವ್ಯಕ್ತಿಗಳನ್ನು ಹಿಡಿದುಕೊಳ್ಳಲು ಹೋದಾಗ ಸದರಿ ವ್ಯಕ್ತಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು ಎಂದು, ನಂತರ ಸದರಿ ವ್ಯಕ್ತಿಗಳನ್ನು ಪೋಲೀಸರು ಸುತ್ತುವರಿದು ಹಿಡಿದುಕೊಂಡರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ43: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಮೊದಲನೇಯವರು ರೇವಣಸಿದ್ದಪ್ಪ (1 ನೇ ಆರೋಪಿ), ಎರಡನೇಯವರು ಸತೀಶ್ ಬಾಬುರಾವ್ (2 ನೇ ಆರೋಪಿ) ಮತ್ತು ಮೂರನೇಯವರು ಲೊಕೇಶ್ (3 ನೇ ಆರೋಪಿ) ಎಂದು ತಿಳಿಯಿತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ

ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ44: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 1 ನೇ ಆರೋಪಿಯ ಬಳಿ ಹಳದಿ ಮತ್ತು ಕೆಂಪು ಮಿಶ್ರಿತ ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಒಂದು ಚೀಲ ಇತ್ತು, ಸದರಿ ಚೀಲದಲ್ಲಿ ನೋಡಲಾಗಿ 32 ಪಾಲಿಥಿನ್ ಕವರ್ ಗಳು ಇದ್ದವು ಎಂದು, ಸದರಿ ಕವರ್ ಗಳಲ್ಲಿ ಸೊಪ್ಪುಗಳು ಇದ್ದವು ಎಂದು, ಸದರಿ ಸೊಪ್ಪುಗಳು ಸಹ ಗಾಂಜಾ ಸೊಪ್ಪು ಅಗಿದ್ದವು ಎಂದು, ಸದರಿ ಸೊಪ್ಪುಗಳು ಚಾಸಾ.13 ಕೊಟ್ರೇಶ್ ರವರು ಖರೀದಿಸಿ ತಂದಿದ್ದ ಎರಡು ಪ್ಯಾಕಗಳಲ್ಲಿ ಇರುವ ಸೊಪ್ಪುಗಳಿಗೆ ಹೋಲಿಕೆಯಾಗಿತ್ತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ45: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 2 ನೇ ಆರೋಪಿಯ ಬಳಿ ಇದ್ದ ಕೆಂಪು ಬಣ್ಣದ ಚೀಲದಲ್ಲಿ ನೋಡಿದಾಗ ಸದರಿ ಚೀಲದಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಗಾಂಜಾ ಸೊಪ್ಪು ಇದ್ದವು ಎಂದು, ಸದರಿ ಗಾಂಜಾ ಸೊಪ್ಪುಗಳನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ 1 ನೇ ಆರೋಪಿಯ ಬಳಿ ಇದ್ದ ಚೀಲದಲ್ಲಿ 218 ಗ್ರಾಂ ಗಾಂಜಾ ಸೊಪ್ಪು ಇತ್ತು ಎಂದು, 2 ನೇ ಆರೋಪಿಯ ಬಳಿ ಇದ್ದ ಚೀಲದಲ್ಲಿ 780 ಗ್ರಾಂ ಗಾಂಜಾ ಸೊಪ್ಪು ಇತ್ತು ಎಂದು, ಸದರಿ ಗಾಂಜಾ ಸೊಪ್ಪುಗಳನ್ನು ಬಿಳಿ ಬಟ್ಟೆ ಹಾಕಿ ಪ್ಯಾಕ್ ಮಾಡಲಾಯಿತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ46: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಚಾಸಾ.4 ಮಾರುತಿ ರವರು 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಆತನ ಬಳಿ ರೂ.1000/- (ರೂ.100/- ಮುಖಬೆಲೆಯ ಹತ್ತು ನೋಟುಗಳು) ಹಣ ಇತ್ತು ಎಂದು, ಸದರಿ ಹಣ ಗಾಂಜಾ ಸೊಪ್ಪು ಮಾರಾಟ ಮಾಡಿದ ಹಣ ಎಂದು ತಿಳಿಸಿದರು ಎಂದು, ಇವೆಲ್ಲಾವುಗಳ

ಬಗ್ಗೆ ಮಧ್ಯಾಹ್ನ 12.40 ರಿಂದ ಮಧ್ಯಾಹ್ನ 02.30 ಗಂಟೆಯುವರೆಗೂ ನಿಪಿ.10 ರಂತೆ ಪಂಚನಾಮೆಯನ್ನು ಮಾಡಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ47: ಫ್ರಾಸಾ-2 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆ ದಿನ ವಶಪಡಿಸಿಕೊಂಡ ಕೈ ಚೀಲಗಳು, ಗಾಂಜಾ ಸೊಪ್ಪಿರುವ ಪಾಲಿಥಿನ್ ಕವರ್ ಗಳು ಎಂ.ಓ.1, ಎಂ.ಓ.3 ಮತ್ತು ಎಂ.ಓ.4 ಎಂದು, ಎಂ.ಓ.1 ಎಂದು ಗುರುತಿಸಲಾದ ವಸ್ತುವಿನ ತನ್ನ ಸಹಿ ಇರುತ್ತದೆಂದು, ನಂತರ ಮಾಲುಗಳ ಸಮೇತ ಆರೋಪಿಗಳನ್ನು ಠಾಣೆಗೆ ಕರೆತಂದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ48: ಫ್ರಾಸಾ-3 ಮಾರುತಿ, ಮನೋಸಾಮಾಜಿಕ ತಜ್ಞರು, ಸಿಜಿ ಆಸ್ಪತ್ರೆ ದಾವಣಗೆರೆ, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ಚಾಸಾ.2 ನಾಗರಾಜ ಮತ್ತು ಚಾಸಾ.3 ವಿರೇಶ್ ರವರು ಸಹ ಸಿಜಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು, ದಿನಾಂಕ 26.12.2019 ರಂದು ತಾನು ಕರ್ತವ್ಯದಲ್ಲಿದ್ದಾಗ, ತಮ್ಮ ಅಧೀಕ್ಷಕರು ತಮ್ಮನ್ನು ಕರೆಸಿ, ಗಾಂಜಾ ಪ್ರಕರಣದಲ್ಲಿ ದಾಳಿ ಮಾಡಬೇಕಾಗಿದೆ ಎಂದು ತಮ್ಮನ್ನು ನೇಮಕ ಮಾಡಿದ್ದೇನೆಂದು ಸಹಕರಿಸಬೇಕೆಂದು ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ49: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ತಾನು ಪತ್ರಾಂಕಿತ ಅಧಿಕಾರಿಯಾಗಿ, ಚಾಸಾ.2 ನಾಗರಾಜ ಮತ್ತು ಚಾಸಾ.3 ವಿರೇಶ್ ರವರು ಮಹಜರು ಸಾಕ್ಷಿಯಾಗಿ ತಾವು ಸಿಎನ್ ಪೋಲೀಸ್ ಠಾಣೆಗೆ ಹೊದೆವು ಎಂದು, ಅಲ್ಲಿ ಇನ್ಸಪೆಕ್ಟರ್ ರವರು ತಮಗೆ ಗಾಂಜಾ ದಾಳಿ ಮಾಡುವ ಬಗ್ಗೆ ಮಾಹಿತಿ ತಿಳಿಸಿದರು ಎಂದು, ಪೋಲೀಸ್

ಠಾಣೆಯಲ್ಲಿ ಪೋಲೀಸ್ ಸಿಬ್ಬಂದಿಗಳೂ ಸಹ ಇದ್ದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ50: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಕೆ.ಎಸ್.ಆರ್.ಟಿ.ಸಿ ಹಿಂಭಾಗದ ಗಣೇಶ್ ಲೇಜೌಟ್ ನ 2 ನೇ ಕ್ರಾಸ್ ಬಳಿ ಅಕ್ರಮ ಗಾಂಜಾ ಮಾರಾಟ ಮಾಡುತ್ತಿರುತ್ತಾರೆಂದು ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ51: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ತಾವು ಎಲ್ಲಾ ಪರಿಕರಗಳೊಂದಿಗೆ ಅಂದರೆ ಲ್ಯಾಪ್ ಟಾಪ್, ಪ್ರಿಂಟರ್ ಮತ್ತು ತೂಕದ ಯಂತ್ರದೊಂದಿಗೆ ಸರ್ಕಾರಿ ವಾಹನದಲ್ಲಿ ಹೊದೆವು ಎಂದು, ಅಲ್ಲಿ ಒಂದು ಮೂಲೆಯಲ್ಲಿ ಅಂದರೆ 100 ರಿಂದ 200 ಅಡಿ ದೂರದಲ್ಲಿ ವಾಹನವನ್ನು ನಿಲ್ಲಿಸಿ, ತಾವು ನಡೆದುಕೊಂಡು ಹೊದೆವು ಎಂದು, ಅಲ್ಲಿ ಒಂದು ಗಿಡ ಬಳಿ ಮೂರು ಜನ ವ್ಯಕ್ತಿಗಳು ಗಾಂಜಾ ಮಾರಾಟ ಮಾಡುವುದು ಕಂಡು ಬಂತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ52: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ತಾವು ಮರೆಯಲಿ ನಿಂತು ನೊಡಲಾಗಿ ಅವರುಗಳ ಬಳಿ ಕೆಂಪು ಮತ್ತು ಹಳದಿ ಚೀಲಗಳು ಇದ್ದು, ಸದರಿ ಚೀಲಗಳಿಂದ ತೆಗೆದು ಪ್ಯಾಕೆಟ್ ಗಳನ್ನು ಕೊಡುತ್ತಿದ್ದರು ಎಂದು, ಸದರಿ ಪ್ಯಾಕೇಟುಗಳು ಏನು ಎಂದು ನೋಡಿಕೊಂಡು ಬರುವಂತೆ ಚಾಸಾ.13 ಕೊಟ್ರೇಶ್ ರವರನ್ನು ರೂ.1000/- ಗಳನ್ನು (100

ರೂಪಾಯಿ ಮುಖಬೆಲೆಯ 10 ನೋಟುಗಳು) ಕೊಟ್ಟು ಕಳುಹಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ53: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅದರಂತೆ ಚಾಸಾ.13 ಕೊಟ್ರೇಶ್ ರವರು ಎರಡು ಪ್ಯಾಕೇಟ್ ಗಳನ್ನು ಖರೀದಿಸಿ ತಂದು ಚಾಸಾ.1 ಮುಸ್ತಾಕಅಹಮ್ಮದ್ ರವರಿಗೆ ಕೊಟ್ಟರು ಎಂದು, ಸದರಿ ಪ್ಯಾಕೇಟ್ ಗಳಲ್ಲಿ ಹೂವು ಮತ್ತು ಮೊಗ್ಗು ಇದ್ದು ವಾಸನೆ ಬರುತ್ತಿದ್ದು, ಅದು ಗಾಂಜಾ ಎಂದು ತಿಳಿದು ಬಂತು ಎಂದು, ನಂತರ ಎಂಟು ಜನ ಪೋಲೀಸರು ಆರೋಪಿತರನ್ನು ಹಿಡಿಯಲು ಹೊದೆವು ಎಂದು, ಸದರಿ ವ್ಯಕ್ತಿಗಳು ಓಡಿ ಹೋಗಲು ಪ್ರಯತ್ನಿಸಿದರು ಎಂದು, ಅವರನ್ನು ಸುತ್ತುವರೆದು ಹಿಡಿದುಕೊಂಡರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ54: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಅವರುಗಳು ರೇವಣಸಿದ್ದಪ್ಪ (1 ನೇ ಆರೋಪಿ), ಸತೀಶ್ ಬಾಬುರಾವ್ (2 ನೇ ಆರೋಪಿ) ಮತ್ತು ಲೋಕೇಶ್ (3 ನೇ ಆರೋಪಿ) ಎಂದು ತಿಳಿಸಿದರು ಎಂದು, ಅವರುಗಳನ್ನು ಏನು ಮಾಡುತ್ತಿದ್ದೀರಾ ಎಂದು ಕೇಳಲಾಗಿ ಅವರು ಗಾಂಜಾ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು ಎಂದು, ಸದರಿ ಗಾಂಜಾವನ್ನು ಹಾವೇರಿ ಜಿಲ್ಲೆಯ ಫಕೀರ್ ಎಂಬ ವ್ಯಕ್ತಿಯಿಂದ ತಂದಿದ್ದೇವೆಂದು ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ55: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಅವರ ಬಳಿ ಕೆಂಪು ಮತ್ತು ಹಳದಿ ಮಿಶ್ರಿತ ಬಟ್ಟೆ ಚೀಲ ಇದ್ದು, ಸದರಿ ಚೀಲದಲ್ಲಿ 32 ಗಾಂಜಾ ಪ್ಯಾಕೇಟ್ ಗಳು ಇದ್ದವು ಎಂದು, 2 ನೇ ಆರೋಪಿಯ ಬಳಿ ಕೆಂಪು ಬಣ್ಣದ ಚೀಲ ಇದ್ದು, ಸದರಿ ಚೀಲದಲ್ಲಿಯೂ ಸಹ ಗಾಂಜಾ ಇತ್ತು ಎಂದು, 1 ನೇ ಆರೋಪಿ ಬಳಿ ಸಿಕ್ಕ ಗಾಂಜಾವನ್ನು ತೂಕ ಮಾಡಲಾಗಿ 280 ಗ್ರಾಂ ಇತ್ತು ಎಂದು, 2 ನೇ ಆರೋಪಿಯ ಬಳಿ 780 ಗ್ರಾಂ ಗಾಂಜಾ ಇತ್ತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ56: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಆತನ ಬಳಿ 100 ರೂಪಾಯಿ ಮುಖಬೆಲೆಯ 10 ನೋಟುಗಳು ಇತ್ತು ಎಂದು, ಸದರಿ ನೋಟುಗಳು ಗಾಂಜಾ ಮಾರಾಟ ಮಾಡಿ ಬಂದ ನೋಟುಗಳು ಎಂದು 1 ನೇ ಆರೋಪಿ ತಿಳಿಸಿದನು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ57: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ವಶಪಡಿಸಿಕೊಂಡ ಗಾಂಜಾಗಳನ್ನು ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿ ತಮ್ಮ ಸಹಿ ಪಡೆದುಕೊಂಡರು ಎಂದು, ಈ ಪ್ರಕ್ರಿಯೆ ಸುಮಾರು 2 ವರೆ ಗಂಟೆಗಳ ವರೆಗೆ ಆಗಿರುತ್ತದೆಂದು, ಈ ಬಗ್ಗೆ ನಿಪಿ.10 ರಂತೆ ಮಹಜರ್ ಬರೆದಿರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ58: ಫ್ರಾಸಾ-3 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಿಪಿ.11 ರಿಂದ ನಿಪಿ.21 ಎಂದು ಗುರುತಿಸಲಾದ ಫೋಟೋಗಳಲ್ಲಿ ಗಾಂಜಾ, ಆರೋಪಿತರು, ಪೋಲೀಸ್ ಸಿಬ್ಬಂದಿ

ಮತ್ತು ಮಹಜರ್ ಸಾಕ್ಷಿಗಳು ಕಂಡು ಬರುತ್ತಾರೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ59: ಫ್ರಾಸಾ-3 ಇವರನ್ನು ಮಾನ್ಯ ಸರ್ಕಾರಿ ಅಭಿಯೋಜರು ಮಾಡಿದ ಪಾಟೀ ಸವಾಲಿನಲ್ಲಿ, ಚಾಸಾ.1 ಮುಸ್ತಾಕಅಹಮ್ಮದ್ ರವರು ಚಾಸಾ.13 ಕೊಟ್ರೇಶ್ ರವರಿಗೆ 100 ರೂಪಾಯಿ ಮುಖಬೆಲೆಯ ಐದು ನೋಟುಗಳನ್ನು ಕೊಟ್ಟು ಕಳುಹಿಸಿದ್ದರು ಎಂದರೆ ಸರಿ ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ60: ಫ್ರಾಸಾ-3 ಇವರನ್ನು ಮಾನ್ಯ ಸರ್ಕಾರಿ ಅಭಿಯೋಜರು ಮಾಡಿದ ಪಾಟೀ ಸವಾಲಿನಲ್ಲಿ, 1 ನೇ ಆರೋಪಿಯ ಬಳಿ ಸಿಕ್ಕಂತಹ ಗಾಂಜಾ ಒಟ್ಟು ತೂಕ 218 ಗ್ರಾಂ ಎಂದರೆ ಸರಿ ಎಂದು, ಚಾಸಾ.13 ಕೊಟ್ರೇಶ್ ರವರು 1 ನೇ ಆರೋಪಿಯಿಂದ ಖರೀದಿಸಿ ತಂದ ಪ್ಯಾಕೇಟ್ ಗಳಲ್ಲಿ ಒಟ್ಟು 12 ಗ್ರಾಂ ಗಾಂಜಾ ಇತ್ತು ಎಂದರೆ ಸರಿ ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಈ ಪ್ರಶ್ನೆ 2 ಮತ್ತು 3 ನೇ ಆರೋಪಿತರಿಗೆ ಸಂಬಂಧಿಸಿರುವುದಿಲ್ಲ.

ಪ್ರಶ್ನೆ61: ಫ್ರಾಸಾ-4 ಡಾಃ ಯರಳಕಟ್ಟೆ ಮಂಜುನಾಥ, ಅಸಿಸ್ಟೆಂಟ್ ಡೈರೆಕ್ಟರ್, ಆರ್.ಎಫ್.ಎಸ್.ಎಲ್. ದಾವಣಗೆರೆ, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ದಿನಾಂಕ 30.12.2019 ರಂದು ಚಾಸಾ.8 ವಿರೇಶ್ ಕುಮಾರ್ ರವರ ಮುಖಾಂತರ ಕೆ.ಟಿ.ಜೆ ನಗರ ಪೋಲೀಸ್ ಠಾಣೆಗೆ ಕ್ರೈಂ ನಂ.216/2019 ರಲ್ಲಿ ಸೀಲ್ ಮಾಡಿದ ಮೂರು ವಸ್ತುಗಳನ್ನು ತಮ್ಮ ಕಛೇರಿಯ ಸ್ವೀಕೃತಿ ವಿಭಾಗದವರು ವಿಶ್ಲೇಷಣೆಗಾಗಿ ಸಂಬಂಧಿಸಿದ ದಾಖಲೆಯ ಸಮೇತ ನೊಂದಾಯಿಸಿಕೊಂಡಿರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ62: ಫ್ರಾಸಾ-4 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ವಸ್ತುಗಳ ಮೇಲೆ ಕೆ.ಟಿ.ಜೆ ನಗರ ಪಿ.ಎಸ್ ಎಂಬ ಅರಗಿನ ಮುದ್ರೆ ಇರುತ್ತದೆಂದು, ಆ ಸೀಲುಗಳು ಸುಸ್ಥಿತಿಯಲ್ಲಿದ್ದು, ತನಿಖಾಧಿಕಾರಿಗಳು ಕಳುಹಿಸಿದ ಮಾದರಿ ಸೀಲುಗಳಿಗೆ ಹೊಂದಾಣಿಕೆಯಾಗುತ್ತಿತ್ತು ಎಂದು, ಸದರಿ ವಸ್ತುಗಳಲ್ಲಿ ವಸ್ತು ಸಂಖ್ಯೆ1 ರಲ್ಲಿ 51.15 ತೂಕವಿತ್ತು ಎಂದು, ವಸ್ತು ಸಂಖ್ಯೆ2 ರಲ್ಲಿ 49.36 ತೂಕವಿತ್ತು. ವಸ್ತು ಸಂಖ್ಯೆ3 ರಲ್ಲಿ 11.95 ತೂಕವಿತ್ತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ63: ಫ್ರಾಸಾ-4 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ವಸ್ತು ಸಂಖ್ಯೆ1 ರಲ್ಲಿ ಎಂಟು ಸಣ್ಣ ಪ್ಲಾಸ್ಟಿಕ್ ಕವರ್ ಗಳು ಇದ್ದು, ಸದರಿ ಪ್ಲಾಸ್ಟಿಕ್ ಕವರ್ ಗಳಲ್ಲಿ ಕಡು ಕಂದು ಬಣ್ಣದ (ಡಾರ್ಕ್ ಬ್ರೌನ್ ಕಲರ್) ಮುರಿದ ಸಣ್ಣ ಕಡ್ಡಿಗಳು, ಒಣಗಿದ ಎಲೆಗಳು, ಹೂವು ಮತ್ತು ಬೀಜಗಳು ಇದ್ದವು. ವಸ್ತು ಸಂಖ್ಯೆ2 ರಲ್ಲಿ ಬಟ್ಟೆ ಚೀಲದಲ್ಲಿ ಮುರಿದ ಸಣ್ಣ ಕಡ್ಡಿಗಳು, ಒಣಗಿದ ಎಲೆಗಳು, ಹೂವು ಮತ್ತು  ಬೀಜಗಳು ಇದ್ದವು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ64: ಫ್ರಾಸಾ-4 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ವಸ್ತು ಸಂಖ್ಯೆ3 ರಲ್ಲಿ ಬಟ್ಟೆ ಚೀಲದಲ್ಲಿ ಎರಡು ಪೇಪರ್ ಪ್ಯಾಕೇಟ್ ಗಳಲ್ಲಿ ಮುರಿದ ಸಣ್ಣ ಕಡ್ಡಿಗಳು, ಒಣಗಿದ ಎಲೆಗಳು, ಹೂವು ಮತ್ತು  ಬೀಜಗಳು ಇದ್ದವು ಎಂದು, ಸದರಿ ಮೂರು ವಸ್ತುಗಳನ್ನು ರಾಸಾಯನಿಕ ಮತ್ತು ಉಪಕರಣಗಳ ಸಹಾಯದಿಂದ ವಿಶ್ಲೇಷಣೆ ನಡೆಸಿದ್ದು, ಸದರಿ ವಸ್ತುಗಳು ಗಾಂಜಾ ಎಂಬ ಮಾದಕ ವಸ್ತು ಎಂದು ಕಂಡು ಬಂದಿರುತ್ತದೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ

ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ65: ಫ್ರಾಸಾ-4 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಪರೀಕ್ಷೆ ನಂತರ ವಸ್ತು ಸಂಖ್ಯೆ1 ರಲ್ಲಿ 36.72 ಗ್ರಾಂ, ವಸ್ತು ಸಂಖ್ಯೆ2 ರಲ್ಲಿ 41.73 ಗ್ರಾಂ ವಸ್ತು ಸಂಖ್ಯೆ3 ರಲ್ಲಿ 5.74 ಗ್ರಾಂ ವಸ್ತುವನ್ನು ಹಿಂದಿರುಗಿಸಿರುತ್ತೇನೆಂದು, ಸೀಲ್ ಮಾಡಿದ ಸದರಿ ವಸ್ತುಗಳನ್ನು ಹಾಗೂ ತನ್ನ ಸಹಿ ಮಾಡಿದ ಮತ್ತು ಹಿರಿಯ ಅಧಿಕಾರಿಗಳ ಮುಖಾಂತರ ವರದಿಯೊಂದಿಗೆ ಸಂಬಂಧಪಟ್ಟ ಪೋಲೀಸ್ ಠಾಣೆಗೆ ಕಳುಹಿಸಿ ಕೊಟ್ಟಿರುತ್ತೇನೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ66: ಫ್ರಾಸಾ-4 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಿಪಿ.23 ರ ವರದಿಯೊಂದಿಗೆ ತನ್ನ ಮಾದರಿ ಸಹಿ ಮತ್ತು ಅರಗಿನ ಸೀಲಿನ ಮಾದರಿ ಸಹ ಕಳುಹಿಸಿ ಕೊಟ್ಟಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ67: ಫ್ರಾಸಾ-4 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅದೇ ರೀತಿ ಎಂ.ಓ.5 ಮತ್ತು ಎಂ.ಓ.6 ಎಂದು ಗುರುತಿಸಲಾದ ಎರಡು ಪ್ಯಾಕ್ ಗಳ ಮೇಲೆ ತನ್ನ ಸಹಿ ಇದೆ ಎಂದು, ಸದರಿ ಎರಡು ಪ್ಯಾಕೇಟ್ ಗಳು ಪಿ.ಎಫ್ ಸಂಖ್ಯೆ113/2019 ರಲ್ಲಿ ನಮೂದಿಸಿದ ಕ್ರಮ ಸಂಖ್ಯೆ1 ಮತ್ತು 2 ಆಗಿರುತ್ತದೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ68: ಫ್ರಾಸಾ-5 ದ್ಯಾಮೇಶ್, ಸಿಪಿಸಿ 142 ಅಜಾದ್‌ನಗರ ವೃತ್ತ ಕಛೇರಿ, ದಾವಣಗೆರೆ, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 26.12.2019 ರಂದು ಮಧ್ಯಹ್ನಾ 12.00 ಗಂಟೆಯ ಸಮಯದಲ್ಲಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ.1 ಮುಸ್ತಾಕಅಹಮ್ಮದ್ ರವರು ತನಗೆ ಮತ್ತು ಚಾಸಾ.9 ನಾಗರಾಜ, ಚಾಸಾ.10 ಮಂಜುನಾಥ, ಚಾಸಾ.11 ಲೋಹಿತ್, ಚಾಸಾ.12 ನಾಗರಾಜ, ಚಾಸಾ.13 ಕೊಟ್ರೇಶ್, ಚಾಸಾ.14 ರವಿ ಮತ್ತು ಚಾಸಾ.16 ದೇವರಾಜ ರವರನ್ನು ಕರೆದು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ದಾಳಿ ಮಾಡಲು ಹೋಗಬೇಕೆಂದು ತಿಳಿಸಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ69: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಮಾಹಿತಿ ಬಂದ ಸ್ಥಳಕ್ಕೆ ಮಧ್ಯಾಹ್ಣ 12.15 ಕ್ಕೆ ಠಾಣೆಯಿಂದ ಹೊರಟು ದಾವಣಗೆರೆ ಕೆ.ಎಸ್.ಆರ್.ಟಿ.ಸಿ ಹಿಂಭಾಗದ ಇಂದಿರಾ ಕ್ಯಾಂಟಿನ್ ಹತ್ತಿರ ಅಂದರೆ ಮಾಹಿತಿ ಬಂದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮರೆಯಲ್ಲಿ ನಿಂತು, ತಾವುಗಳು ಒಬ್ಬರಿಗೊಬ್ಬರು ಅಂಗಶೋಧನೆ ಮಾಡಿಕೊಂಡು, ತಮ್ಮಲ್ಲಿ ಗಾಂಜಾ ಇಲ್ಲದಿರುವ ಬಗ್ಗೆ ಖಚಿತಿ ಪಡಿಸಿಕೊಂಡೆವು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ70: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅಂಗಶೋಧನೆ ಮಾಡಿಕೊಂಡ ನಂತರ ಮಾಹಿತಿ ಬಂದ ಸ್ಥಳದ ಕಡೆ ನೋಡಿದಾಗ, ಅಲ್ಲಿ ಮೂರು ಜನ ವ್ಯಕ್ತಿಗಳು ನಿಂತುಕೊಂಡಿದ್ದರು, ಅದರಲ್ಲಿ ಇಬ್ಬರ ಕೈಯಲ್ಲಿ ಕವರ್ ಗಳನ್ನು ಹಿಡಿದುಕೊಂಡು, ಗಿರಾಕಿಗಳಿಗಾಗಿ ಕಾಯುತ್ತಿರುವುದು ಕಂಡು ಬಂತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ71: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆಗ ಚಾಸಾ.1 ಮುಸ್ತಾಕಅಹಮ್ಮದ್ ರವರು ಚಾಸಾ.13 ಕೊಟ್ರೇಶ್ ರವರಿಗೆ ರೂ.500/- ಕೊಟ್ಟು ಸದರಿ ವ್ಯಕ್ತಿಗಳಿಂದ ಗಾಂಜಾವನ್ನು ಖರೀದಿ ಮಾಡಿಕೊಂಡು ಬರುವಂತೆ ಹೇಳಿ ಕಳುಹಿಸಿದರು ಎಂದು, ಆಗ ಚಾಸಾ.13 ಕೊಟ್ರೇಶ್ ರವರು ಗಾಂಜಾ ಇರುವ ಎರಡು ಪಾಲಿಥಿನ್ ಕವರ್ ಗಳನ್ನು ಖರೀದಿಸಿಕೊಂಡು ಬಂದರು ಎಂದು, ಸದರಿ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ತೆರೆದು ನೋಡಿದಾಗ ಸದರಿ ಕವರ್ ನಲ್ಲಿ ಗಾಂಜಾ ಇರುವುದು ಕಂಡು ಬಂತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ72: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅದಾದ ನಂತರ ಸದರಿ ಚಾಸಾ.1 ಮುಸ್ತಾಕಅಹಮ್ಮದ್ ರವರ ಸೂಚನೆಯಂತೆ ಸದರಿ ಮೂರು ಜನ ವ್ಯಕ್ತಿಗಳನ್ನು ಹಿಡಿದುಕೊಳ್ಳಲು ಹೊದಾಗ ಅವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು, ಆದರೂ ಸಹ ನಾವುಗಳು ಅವರುಗಳನ್ನು ಹಿಡಿದುಕೊಂಡು, ಅವರುಗಳ ಹೆಸರು ಮತ್ತು ವಿಳಾಸ ಕೇಳಲಾಗಿ, 1. ರೇವಣಸಿದ್ದಪ್ಪ, 2. ಸತೀಶ್ ಬಾಬುರಾವ್ ಮತ್ತು 3. ಲೋಕೇಶ್ ಎಂದು ತಿಳಿಸಿದರು. ಸದರಿ ಮೂರು ವ್ಯಕ್ತಿಗಳ ಪೈಕಿ ಇಬ್ಬರಲ್ಲಿ ಕವರ್ ಗಳು ಇದ್ದವು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ73: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 1 ನೇ ಆರೋಪಿಯ ಕೈಯಲ್ಲಿ ಇದ್ದಂತಹ ಹಳದಿ ಮತ್ತು ಕೆಂಪು ಮಿಶ್ರಿತ ಕವರ್ ನ್ನು ಪರಿಶೀಲಿಸಲಾಗಿ ಸದರಿ ಕವರ್ ನಲ್ಲಿ ಗಾಂಜಾ ಇತ್ತು ಎಂದು, 2 ನೇ ಆರೋಪಿಯ ಬಳಿ ಇದ್ದ ಕವರ್ ನ್ನು ಪರಿಶೀಲಿಸಲಾಗಿ ಸದರಿ ಕವರ್ ನಲ್ಲಿ ಸಹ ಗಾಂಜಾ ಇತ್ತು ಎಂದು, ಸದರಿ ಗಾಂಜಾವನ್ನು ಎಲ್ಲಿಂದ

ತಂದಿರುವುದಾಗಿ ಮತ್ತು ಯಾಕೇ ತಂದಿರುವುದಾಗಿ ಕೇಳಲಾಗಿ, ಶಿಶುನಾಳ ಊರಿನ ಪಕೀರ ರಿಂದ ಮಾರಾಟ ಮಾಡುವ ಉದ್ದೇಶದಿಂದ ತಂದಿರುವುದಾಗಿ ತಿಳಿಸಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ74: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಪಂಚರ ಸಮಕ್ಷಮ ಸದರಿ ಗಾಂಜಾವನ್ನು ತೂಕ ಯಂತ್ರದಿಂದ ತೂಕ ಮಾಡಿಸಿದ್ದು, ಚಾಸಾ.13 ಕೊಟ್ರೇಶ್ ರವರು ಆರೋಪಿತರಿಂದ ಖರೀದಿಸಿ ತಂದಿದ್ದ ಗಾಂಜಾವನ್ನು ಸಹ ತೂಕ ಮಾಡಲಾಯಿತು ಎಂದು, 1 ನೇ ಆರೋಪಿ ಬಳಿ 218 ಗ್ರಾಂ ಗಾಂಜಾ ಇತ್ತು ಮತ್ತು 2 ನೇ ಅರೋಪಿ ಬಳಿ 780 ಗ್ರಾಂ ತೂಕ ಗಾಂಜಾ ಇತ್ತು. ಚಾಸಾ.13 ರವರು ಖೀರಿದಿ ಮಾಡಿಕೊಂಡು ತಂದಿದ್ದ ಗಾಂಜಾ 12 ಗ್ರಾಂ ಇತ್ತು. ಸದರಿ ಗಾಂಜಾಗಳನ್ನು ಚಾಸಾ.12 ನಾಗರಾಜ ರವರಿಂದ ಪ್ಯಾಕ್ ಮಾಡಿಸಿ, ಸೀಲ್ ಮಾಡಿ ವಶಕ್ಕೆ ಪಡೆದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ75: ಫ್ರಾಸಾ-1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಆರೋಪಿತರಲ್ಲಿ ಗಾಂಜಾ ಮತ್ತು ಗಾಂಜಾ ಮಾರಾಟ ಮಾಡಿದ ಹಣ ಇರುವ ಬಗ್ಗೆ ಅಂಗಶೋಧನೆ ಮಾಡಲು ಚಾಸಾ.1 ಮುಸ್ತಾಕಅಹಮ್ಮದ್ ರವರು ಪತ್ರಾಂಕಿತ ಅಧಿಕಾರಿ ಸಮಕ್ಷಮ ಆರೋಪಿತರಿಗೆ ಅಂಗಶೋಧನೆ ಮಾಡಲು ಕೇಳಿದಾಗ ಪತ್ರಾಂಕಿತ ಅಧಿಕಾರಿ ಅಂಗಶೋಧನೆ ಮಾಡಲು ಒಪ್ಪಿಸಹಿ ಮಾಡಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ76: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ.4 ಮಾರುತಿ ರವರು ಚಾಸಾ.1 ಮುಸ್ತಾಕಅಹಮ್ಮದ್ ರವರ ಕೋರಿಕೆಯ ಮೇರೆಗೆ ಆರೋಪಿತರ ಅಂಗಶೋಧನೆ ಮಾಡಿದ್ದು, 2 ಮತ್ತು 3 ನೇ ಆರೋಪಿ ಬಳಿ ಗಾಂಜಾ ಮತ್ತು ಗಾಂಜಾಕ್ಕೆ ಸಂಬಂಧಿಸಿದ ಹಣ ಸಿಕ್ಕಿರುವುದಿಲ್ಲ ಎಂದು, 1 ನೇ ಆರೋಪಿ ಬಳಿ ರೂ.100/- ಮುಖಬೆಲೆಯ ಹತ್ತು ನೋಟುಗಳು ಸಿಕ್ಕಿದ್ದು, ಸದರಿ ಹಣದ ಬಗ್ಗೆ 1 ನೇ ಆರೋಪಿಯನ್ನು ವಿಚಾರಿಸಿದಾಗ ಸದರಿ ಹಣ ಗಾಂಜಾ ಮಾರಾಟ ಮಾಡಿದ್ದರಿಂದ ಬಂದ ಹಣ ಎಂದು ತಿಳಿಸಿದನು ಎಂದು, ಸದರಿ ಹಣವನ್ನು ವಶಕ್ಕೆ ಪಡೆದುಕೊಂಡರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ77: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಮೇಲ್ಕಂಡ ಆರು ಸೊತ್ತುಗಳನ್ನು ಮತ್ತು ಆರೋಪಿತರನ್ನು ವಶಕ್ಕೆ ಪಡೆದುಕೊಂಡರು ಎಂದು, ನಿಪಿ.10 ರ ಪಂಚನಾಮೆಯನ್ನು ಪಂಚರ ಸಮಕ್ಷಮ, ಪತ್ರಾಂಕಿತ ಅಧಿಕಾರಿಯ ಸಮಕ್ಷಮ ಮತ್ತು ಚಾಸಾ.1 ಮುಸ್ತಾಕಅಹಮ್ಮದ್ ರವರು ನುಡಿದಿದಂತೆ ತಾನು ಲ್ಯಾಪ್ ಟ್ಯಾಪ್ ನಲ್ಲಿ ಟೈಪ್ ಮಾಡಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ78: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಮಹಜರ್ ಸಮಯದಲ್ಲಿ ನಿಪಿ.11 ರಿಂದ ನಿಪಿ.21 ರಂತೆ ಪೊಟೋ ತೆಗೆಸಿರುತ್ತಾರೆಂದು, ಸದರಿ ಪೊಟೋದಲ್ಲಿ ತಾನು ಲ್ಯಾಪ್ ಟ್ಯಾಪ್ ನಲ್ಲಿ ಟೈಪ್ ಮಾಡುತ್ತಿರುವುದು ಕಂಡು ಬರುತ್ತದೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ79: ಫ್ರಾಸಾ-5 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಕೆ.ಟಿ.ಜೆ ನಗರ ಪೋಲೀಸ್ ಠಾಣೆಗೆ ಮಾಲುಗಳು ಮತ್ತು ಆರೋಪಿಗಳ ಸಮೇತ ಹಿಂದಿರುಗಿದ್ದು, ಆರೋಪಿತರ ವಿರುದ್ಧ ಆರೋಪಿ ಸಾಬಿತಾಗಿದ್ದರಿಂದ, ಅವರುಗಳ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ80: ಫ್ರಾಸಾ-6 ಗಿರೀಶ್ ಎಸ್ ಹೆಚ್, ಲೋಕಾಯುಕ್ತ ಪೋಲೀಸ್ ಠಾಣಾ ದಾವಣಗೆರೆ, ಪೋಲೀಸ್ ಪೇದೆ, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 27.12.2019 ರಂದು ಚಾಸಾ.18 ವಿರೇಶ್ ರವರು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಗಾಂಜಾವನ್ನು 2 ನೇ ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆಯಲ್ಲಿ ಇನ್ವೆಂಟರಿ ಮಾಡಿಸಲು ಬಂದಿದ್ದೇವು ಎಂದು, ಇನ್ವೆಂಟರಿ ಮಾಡಿಸುವ ಸಂದರ್ಭದಲ್ಲಿ ತಾನು ನಿಪಿ.25 ರಿಂದ ನಿಪಿ.30 ರಂತೆ ಪೊಟೋಗಳನ್ನು ತೆಗೆದಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ81: ಫ್ರಾಸಾ-6 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಪೊಟೋಗಳನ್ನು ತನ್ನ ಮೊಬೈಲ್ ನಲ್ಲಿ ತೆಗೆದಿರುತ್ತೇನೆಂದು, ಸದರಿ ಪೊಟೋಗಳನ್ನು ಪ್ರಿಂಟ್ ಹಾಕಿಸಿ ತನಿಖಾಧಿಕಾರಿಗೆ ಕೊಟ್ಟಿರುತ್ತೇನೆಂದು, ಪೊಟೋಗಳನ್ನು ತೆಗೆದು ಪ್ರಿಂಟ್ ತೆಗೆಸಿದ ಬಗ್ಗೆ ಕಲಂ 65(ಬಿ) ಸಾಕ್ಷ್ಯ ಅಧಿನಿಯಮ ರಡಿಯಲ್ಲಿ ನಿಪಿ.31 ರಂತೆ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆಂದು, ಸದರಿ ಪೊಟೋಗಳನ್ನು ನಿಪಿ.32 ರ ಸಿಡಿ ಗೆ ಅಳವಡಿಸಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ82: ಫ್ರಾಸಾ-7 ಕಿರಣ್, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 27.12.2019 ರಂದು ಮಾಡಿದ ನಿಪಿ.33 ರ ಸ್ಥಳ ಪಂಚನಾಮೆ ದಾಖಲೆಯಲ್ಲಿ ತನ್ನ ಸಹಿ ಇರುತ್ತದೆಂದು, ಆ ಸಂದರ್ಭದಲ್ಲಿ ನಿಪಿ.34 ರಂತೆ ಪೋಟೋ ತೆಗೆಸಿರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ83: ಫ್ರಾಸಾ-7 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಿಪಿ.33 ಕ್ಕೆ ತಾನು ತನ್ನ ಸಹಿಯನ್ನು ಸ್ಥಳದಲ್ಲಿ ಅಂದರೆ ಶಿಶುನಾಳ ಶರೀಫರವರ ಸಮಾಧಿಯಿಂದ ಸುಮಾರು 500 ಮೀಟರ್ ದೂರದಲ್ಲಿ ಮಾಡಿರುತ್ತೇನೆಂದು, ಸದರಿ ಮಹಜರನ್ನು ಗಾಂಜಾ ಕೇಸು ಸಂಬಂಧ ಬರೆದಿರುತ್ತಾರೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ84: ಫ್ರಾಸಾ-7 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಜಾಗವನ್ನು ಸತೀಶ್ (2 ನೇ ಆರೋಪಿ) ಎನ್ನುವವರು ತೋರಿಸಿರುತ್ತಾರೆಂದು, ಸತೀಶನೊಂದಿಗೆ ಇನ್ನು ಇಬ್ಬರು ಇದ್ದು, ಅವರುಗಳು ರೇವಣಸಿದ್ದಪ್ಪ ಮತ್ತು ಲೋಕೇಶ (1 ಮತ್ತು 3 ನೇ ಆರೋಪಿತರು ಆಗಿರುತ್ತಾರೆ.) ಎಂದು, ಮಹಜರನ್ನು ಬೆಳಿಗ್ಗೆ 10.45 ರಿಂದ 11.45 ಗಂಟೆಯವರೆಗೆ ಬರೆದಿರುತ್ತಾರೆಂದು, ನಿಪಿ.33 ರಲ್ಲಿ ತನ್ನ ಜೊತೆ ಚಾಸಾ.6 ರಮೇಶ್ ಮತ್ತು ತನಿಖಾಧಿಕಾರಿ ಸಹಿ ಮಾಡಿರುತ್ತಾರೆಂದು, ಇದೇ ಜಾಗದಲ್ಲಿ ಗಾಂಜಾವನ್ನು ಖರೀದಿಸಿದ್ದಾಗಿ 2 ನೇ ಆರೋಪಿ ಹೇಳಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ85: ಫ್ರಾಸಾ-8 ಕೊಟ್ರೇಶ್, ಸಿಪಿಸಿ- 447, ವಿದ್ಯಾನಗರ ಪೋಲೀಸ್ ಠಾಣೆ, ಇವರು ತಮ್ಮ ಮುಖ್ಯ

ಸಾಕ್ಷ್ಯದಲ್ಲಿ, ದಿನಾಂಕ 26.12.2019 ರಂದು ತಾನು ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ ಇದ್ದಾಗ ಮಧ್ಯಾಹ್ನ 12.00 ಗಂಟೆಯ ಸಮಯದಲ್ಲಿ ತಮ್ಮ ಪೋಲೀಸ್ ಇನ್ ಸ್ಪೆಕ್ಟರ್ ರವರು ತನಗೆ ಮತ್ತು ಚಾಸಾ.9 ನಾಗರಾಜ, ಚಾಸಾ.10 ಮಜುನಾಥ, ಚಾಸಾ.11 ಲೊಹಿತ್, ಚಾಸಾ.12 ನಾಗರಾಜ, ಚಾಸಾ.13 ಕೊಟ್ರೇಶ್, ಚಾಸಾ.14 ರವಿ, ಚಾಸಾ.15 ದ್ಯಾಮೇಶ್ ಮತ್ತು ಚಾಸಾ.16 ದೇವರಾಜ ರವರಿಗೆ ಚಾಸಾ.1 ಮುಸ್ತಾಕಅಹಮ್ಮದ್ ರವರ ಕಛೇರಿಗೆ ಬರಲು ಹೇಳಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ86: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಅದರಂತೆ ತಾವು ಚಾಸಾ.1 ರವರ ಕಛೇರಿಗೆ ಹೋಗಿದ್ದು, ಚಾಸಾ.1 ರವರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹಿಂಭಾಗ, ಗಣೇಶ ಲೇಔಟ್, 2 ನೇ ಕ್ರಾಸ್ ನಲ್ಲಿ ಯಾರೋ 3 ಜನ ವ್ಯಕ್ತಿಗಳು ಗಾಂಜಾ ಮಾರಾಟ ಮಾಡಲು ಬಂದಿದ್ದಾರೆ ಎಂದು ಮಾಹಿತಿ ಬಂದಿದ್ದು, ತಾವುಗಳೆಲ್ಲಾರೂ ದಾಳಿಗೆ ಹೋಗೋಣ ಎಂದು ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ87: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಇದೇ ಸಂದರ್ಭದಲ್ಲಿ ಚಾಸಾ.1 ಮುಸ್ತಾಕಅಹಮ್ಮದ್ ರವರು ಹೆಚ್.ಸಿ. 106 ಇವರಿಗೆ ಪಂಚರನ್ನು ಮತ್ತು ಪತ್ತಾಂಕಿತ ಅಧಿಕಾರಿಯನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದರು ಎಂದು, ಅದರಂತೆ ಪಂಚರಾಗಿ ಚಾಸಾ.2 ನಾಗರಾಜ ಮತ್ತು ಚಾಸಾ.3 ವಿರೇಶ್ ಮತ್ತು ಪತ್ತಾಂಕಿತ ಅಧಿಕಾರಿಯಾಗಿ ಚಾಸಾ.4 ಮಾರುತಿ ಇವರನ್ನು ಕರೆದುಕೊಂಡು ಬಂದರು ಎಂದು, ಇವರುಗಳಿಗೆ ಚಾಸಾ.1 ಮುಸ್ತಾಕಅಹ್ಮುದ್ ರವರು ಗಾಂಜಾ ಮಾರಾಟದ ಮಾಹಿತಿ ತಿಳಿಸಿದರು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 88: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ತಾವೆಲ್ಲರೂ ಸರಕಾರಿ ವಾಹನಗಳಲ್ಲಿ ಮತ್ತು ಬೈಕುಗಳಲ್ಲಿ ಮಧ್ಯಾಹ್ನ 12.15 ಗಂಟೆಗೆ ಠಾಣೆಯಿಂದ ಹೊರಟು 12.30 ಗಂಟೆಗೆ ಗಣೇಶ ಲೇಔಟಿನ ಇಂದಿರಾ ಕ್ಯಾಂಟಿನ ಹತ್ತಿರ ಇರುವ ಜಾಲಿ ಗಿಡಗಳ ಪಕ್ಕದಲ್ಲಿ ನಿಂತುಕೊಂಡು, ಗಾಂಜಾ ಮಾರಾಟ ಮಾಡಲು ಬಂದ ವ್ಯಕ್ತಿಗಳ ಚಲನವಲನಗಳನ್ನು ಗಮನಿಸಿದೆವು ಎಂದು, ಸದರಿ ಸ್ಥಳದಲ್ಲಿ 3 ಜನ ಆರೋಪಿತರು ಇದ್ದರು ಎಂದು, ಅವರಲ್ಲಿ ಒಬ್ಬ ಕೆಂಪು ಮತ್ತು ಹಳದಿ ಬಣ್ಣದ ಕವರ್ ಹಿಡಿದುಕೊಂಡಿದ್ದು, ಇನ್ನೊಬ್ಬ ಕೆಂಪು ಬಣ್ಣದ ಕವರನ್ನು ಹಿಡಿದುಕೊಂಡಿದ್ದ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 89: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಈ ಸಂದರ್ಭದಲ್ಲಿ ಚಾಸಾ.1 ಮುಸ್ತಾಕಅಹಮ್ಮದ್ ರವರು 100 ರೂ ಮುಖಬೆಲೆಯ ಐದು ನೋಟುಗಳನ್ನು ತನಗೆ ನೀಡಿ, ಗಾಂಜಾ ಮಾರಾಟ ಮಾಡಲು ನಿಂತಿದ್ದ ವ್ಯಕ್ತಿಗಳ ಬಳಿ ಹೋಗಿ ಗಾಂಜಾವನ್ನು ಖರೀದಿಸಿ ತರಲು ತಿಳಿಸಿದರು ಎಂದು, ಅದರಂತೆ ತಾನು ಸದರಿ 3 ಜನರ ಪೈಕಿ ಕೆಂಪು ಮತ್ತು ಹಳದಿ ಬಣ್ಣದ ಕವರನುನ ಹಿಡಿದುಕೊಂಡಿದ್ದ ವ್ಯಕ್ತಿಯ ಬಳಿ ಹೋಗಿ 200 ರೂಪಾಯಿಗೆ ಒಂದು ಪ್ಯಾಕೆಟ್ ನಂತೆ ಎರಡು ಪ್ಯಾಕೇಟಗಳನ್ನು ಖರೀದಿಸಿ, ಚಾಸಾ.1 ರವರಿಗೆ ಕೊಟ್ಟು, ಉಳಿದ 100 ರೂಪಾಯಿಯನ್ನು ಸಹ ಕೊಟ್ಟೆನು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 90: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಎರಡು ಪ್ಯಾಕೆಟ್

ಗಳನ್ನು ಚಾಸಾ.1 ರವರು ತೆರೆದು ನೋಡಿದಾಗ ಗಾಂಜಾದ ಘಾಟು ವಾಸನೆ ಬಂದಿದ್ದು, ಸದರಿ ಗಾಂಜಾ ಹೂವು, ಮೊಗ್ಗು ಮತ್ತು ಬೀಜಗಳಿಂದ ಕೂಡಿತ್ತು ಎಂದು, ಇದು ಗಾಂಜಾ ಎಂದು ಖಚಿತಪಡಿಸಿಕೊಂಡ ಮೇಲೆ ತಾವು ದಾಳಿ ಮಾಡಲು ಸದರಿ ವ್ಯಕ್ತಿಗಳ ಬಳಿ ಹೋದಾಗ ಅವರು ಓಡಿ ಹೋಗಲು ಪ್ರಯತ್ನಿಸಿದರು ಎಂದು, ತಾವೆಲ್ಲರೂ ಸುತ್ತುವರಿದು, ಆ ಮೂವರನ್ನು ವಶಕ್ಕೆ ಪಡೆದವು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ91: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ.1 ಮುಸ್ತಾಕಅಹಮ್ಮದ್ ರವರು ಚಾಸಾ.4 ಮಾರುತಿ ರವರ ಸಮಕ್ಷಮ ಸದರಿ 3 ಜನರನ್ನು ವಿಚಾರಿಸಿದಾಗ ಅವರುಗಳು ತಮ್ಮ ಹೆಸರು ರೇವಣಸಿದ್ದಪ್ಪ, ಸತೀಶ್ ಬಾಬುರಾವ್ ಮತ್ತು ಲೋಕೇಶ ಎಂದು ಅವರುಗಳು ತಮ್ಮ ಹೆಸರುಗಳನ್ನು ತಿಳಿಸಿದರು ಎಂದು, ಅವರುಗಳು ಈ ಪ್ರಕರಣದ ಆರೋಪಿ 1 ರಿಂದ 3 ಇರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ92: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಮೂವರು ಆರೋಪಿತರ ಪೈಕಿ 1 ನೇ ಆರೋಪಿ ಬಳಿ ಕೆಂಪು ಮತ್ತು ಹಳದಿ ಬಣ್ಣದ ಮಾರುತಿ ಟೆಕ್ಸ ಟೈಲ್ಸ ಎಂದು ಹೆಸರಿರುವ ಕವರನ್ನು ವಶಕ್ಕೆ ಪಡೆದುಕೊಂಡರು ಎಂದು, ಸದರಿ ಕವರಿನಲ್ಲಿ ಹೂ, ಮೊಗ್ಗು ಮತ್ತ ಬೀಜಗಳಿಂದ ಕೂಡಿದ ಗಾಂಜಾ ಇತ್ತು, ಅದನ್ನು ತೂಕ ಮಾಡಲಾಗಿ, 218 ಗ್ರಾಮ್ ಇತ್ತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ93: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 2 ನೇ ಆರೋಪಿಯ ಬಳಿ ಕೆಂಪು ಬಣ್ಣದ ಕವರಿದ್ದು, ಅದನ್ನು ವಶಕ್ಕೆ ಪಡೆದು ನೋಡಿದಾಗ ಅದರಲ್ಲಿ ಹೂ, ಮೊಗ್ಗು ಮತ್ತು ಬೀಜ ಇರುವ ಗಾಂಜಾ ಇತ್ತು ಎಂದು, ಅದನ್ನು ತೂಕ ಮಾಡಲಾಗಿ ಅದು ಒಟ್ಟು 780 ಗ್ರಾಂ ಇತ್ತು ಎಂದು, ತಾನು ಖರೀದಿಸಿ ತಂದ್ದಿ ಗಾಂಜಾವನ್ನು ತೂಕ ಮಾಡಲಾಗಿ ಎರಡು ಪ್ಯಾಕೇಟ್ ಸೇರಿ ಒಟ್ಟು 12 ಗ್ರಾಂ ಇತ್ತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ94: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಪತ್ರಾಂಕಿತ ಅಧಿಕಾರಿಗೆ ಆರೋಪಿತರ ಅಂಗಶೋಧನೆ ಮಾಡಲು ಆರೋಪಿತರನ್ನು ಕೇಳಲಾಗಿ, ಆರೋಪಿತರು ಅಂಗಶೋಧನೆ ಮಾಡಲು ಒಪ್ಪಿಗೆ ನೀಡಿರುತ್ತಾರೆಂದು, ಅದರಂತೆ ಪತ್ರಾಂಕಿತ ಅಧಿಕಾರಿಗಳು 1 ನೇ ಆರೋಪಿಯ ಅಂಗಶೋಧನೆ ಮಾಡಿದಾಗ 100 ರೂ ಮುಖಬೆಲೆಯ 10 ನೋಟುಗಳು ದೊರೆತಿರುತ್ತವೆಂದು, ಈ ಹಣದ ಬಗ್ಗೆ ವಿಚಾರಿಸಿದಾಗ ಸದರಿ ಹಣ ಗಾಂಜಾ ಮಾರಾಟದಿಂದ ಬಂದ ಹಣ ಎಂದು ತಿಳಿಸಿರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ95: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಈ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಸ್ಥಳದಲ್ಲಿ ಸೀಲ್ ಮಾಡಿದರು ಎಂದು, ಹಾಗೂ ನಿಪಿ.10 ರಂತೆ ಪಂಚನಾಮೆಯನ್ನು ಮಧ್ಯಾಹ್ನ 12.40 ರಿಂದ 2.30 ಗಂಟೆಯವರೆಗೆ ಮಾಡಿರುತ್ತೇವೆಂದು, ಪಂಚಾಮೆಯ ಸಮಯದಲ್ಲಿ ನಿಪಿ.11 ರಿಂದ ನಿಪಿ.21 ರಂತೆ ಫೋಟೋಗಳನ್ನು ತೆಗೆದಿರುತ್ತಾರೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ96: ಫ್ರಾಸಾ-8 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಸದರಿ ಮಾಲುಗಳೊಂದಿಗೆ ಆರೋಪಿತರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ97: ಫ್ರಾಸಾ-9 ದೇವರಾಜ, ಪೋಲೀಸ್ ಪೇದೆ, ಜಾಗೃತದಳ, ಬೆಸ್ಕಾಂ, ದಾವಣಗೆರೆ, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ದಿನಾಂಕ 26.12.2019 ರಂದು ತಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಚಾಸಾ.1 ಮುಸ್ತಾಕಅಹಮ್ಮದ್ ರವರು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ, ದಾಳಿಗೆ ಹೋಗಬೇಕೆಂದು ತನಗೆ ಕರೆದು ಹೇಳಿದರು ಎಂದು, ಆ ಪ್ರಕಾರ ಆ ದಿನ ತಾವು ಚಾಸಾ.1 ರವರ ಜೊತೆಯಲ್ಲಿ ಘಟನಾ ಸ್ಥಳಕ್ಕೆ ಪಂಚರು ಮತ್ತು ಸಿಬ್ಬಂದಿಗಳು ಹೋದೆವು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ98: ಫ್ರಾಸಾ-9 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸ್ಥಳದಲ್ಲಿ ತನಿಖೆ ಮತ್ತು ಅಮಾನತ್ತು ಮಹಜರು ಕ್ರಮ ಜರುಗಿಸುವಾಗ ಪೋಟೋಗಳನ್ನು ತೆಗೆಯಲು ಮತ್ತು ವೀಡಿಯೋ ಮಾಡುವಂತೆ ತನಗೆ ತಿಳಿಸಿದ್ದರು ಎಂದು, ಮಹಜರು ಕ್ರಮವನ್ನು ಮಧ್ಯಾಹ್ನ 12.40 ರಿಂದ 2.30 ಗಂಟೆಯವರೆಗೆ ಮಾಡಲಾಯಿತು ಎಂದು, ಆ ಸಮಯದಲ್ಲಿ ನಿಪಿ.11 ರಿಂದ ನಿಪಿ.21 ರಂತೆ ಪೋಟೋಗಳನ್ನು ತೆಗೆದಿರುತ್ತೇನೆಂದು, ಸದರಿ ಪೋಟೋಗಳನ್ನು ನಿಪಿ.35 ರ ಡಿವಿಡಿಗೆ ಅಳವಡಿಸಿರುತ್ತೇನೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ99: ಫ್ರಾಸಾ-9 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಫೋಟೋಗಳಿಗೆ ಸಂಬಂಧಿಸಿದಂತೆ ಕಲಂ 65(ಬಿ) ಅಡಿ ನಿಪಿ.36 ರಂತೆ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ100: ಫ್ರಾಸಾ-10 ವೀರೇಶ್ ಆರ್, ವೃತ್ತ ನಿರೀಕ್ಷಕರು, ಹಾನಗಲ್ ವೃತ್ತ, ಹಾವೇರಿ ಜಿಲ್ಲೆ, ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ದಿನಾಂಕ 26.12.2019 ರಂದು ಬೆಳಿಗ್ಗೆ 11.00 ಗಂಟೆಗೆ ಠಾಣಾ ಕರ್ತವ್ಯದಲ್ಲಿದ್ದಾಗ, ಜಿಲ್ಲಾ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಯಾದ ಚಾಸಾ.1 ರವರು ಠಾಣೆಗೆ ಹಾಜರಾಗಿ ನಿಪಿ.3 ರಂತೆ ದೂರನ್ನು ನೀಡಿದ್ದರೆಂದು, ಸದರಿ ದೂರಿನ ಆಧಾರದ ಮೇರೆಗೆ ಪ್ರಕರಣವನ್ನು ದಾಖಲಿಸಿ, ನಿಪಿ.37 ರಂತೆ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ101: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಮಧ್ಯಾಹ್ನ 3.20 ರ ಸುಮಾರಿಗೆ ಚಾಸಾ.1 ಮುಸ್ತಾಕಅಹಮ್ಮದ್ ರವರು 3 ಜನ ಆರೋಪಿತರನ್ನು, ವಶಪಡಿಸಿಕೊಂಡ ಮಾಲು ಮತ್ತು ಪಂಚನಾಮೆ, ಒಂದು ಲಿಖಿತ ವರದಿಯನ್ನು ತಯಾರು ಮಾಡಿದ್ದನ್ನು ನೀಡಿದ್ದು, ಅದನ್ನು ತಾನು ಮಧ್ಯಾಹ್ನ 3.30 ಕ್ಕೆ ಸ್ವೀಕರಿಸಿ, ಆರೋಪಿತರನ್ನು ವಿಚಾರಣೆ ಮಾಡಿ ಅವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡೆನು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 102: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿತರು ತಮ್ಮ ಹೇಳಿಕೆಗಳಲ್ಲಿ ತಾವು ಶಿಗ್ಗಾವಂ ತಾಲ್ಲೂಕಿನ ಶಿಶುವಿನಾಳದ ಬಳಿ ಅಮವಾಸ್ಯೆ ಸಮಯದಲ್ಲಿ ಬರುವ ಪಕ್ಕೀರರ ಬಳಿ ಕಡಿಮೆ ಹಣಕ್ಕೆ ಅವರಿಂದ ಗಾಂಜಾವನ್ನು ಖರೀದಿಸಿ ತಂದು ಹೆಚ್ಚಿನ ಬೆಲೆಗೆ ಮಾರುತ್ತಿದ್ದುದಾಗಿಯೂ, ನೀವು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದರೆ ಗಾಂಜಾವನ್ನು ಖರೀದಿಸಿ ತಂದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 103: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿ 1 ರಿಂದ 3 ರವರು ನಿಪಿ.38 ರಿಂದ ನಿಪಿ.40 ರಂತೆ ತಮ್ಮ ಸ್ವಇಚ್ಛಾ ಹೇಳಿಕೆಗಳನ್ನು ಕೊಟ್ಟಿರುತ್ತಾರೆಂದು, ದೂರಿನೊಂದಿಗೆ ಹಾಜರುಪಡಿಸಿದ ವಶಪಡಿಸಿಕೊಂಡ ಮಾಲುಗಳನ್ನು ಮಾಲಪಟ್ಟಿ ಸಂಖ್ಯೆ 111/2019 ರಲ್ಲಿ ಅಳವಡಿಸಿರುತ್ತೇನೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 104: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಸಾಕ್ಷಿದಾರರಾದ ಚಾಸಾ.2 ನಾಗರಾಜ, ಚಾಸಾ.3 ವಿರೇಶ್ ಮತ್ತು ಚಾಸಾ.4 ಮಾರುತಿ ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆಂದು, ನಂತರ ಆರೋಪಿತರನ್ನು ಸೂಕ್ತ ಬೆಂಗಾವಲಿನೊಂದಿಗೆ ಠಾಣೆಯಲ್ಲಿ ಇರಿಸಿಕೊಂಡೆನು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 105: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 27.12.2019 ರಂದು ಪಂಚರಾದ ಚಾಸಾ.5 ಕಿರಣ್ ಮತ್ತು ಚಾಸಾ.6 ರಮೇಶ್ ರವರಿಗೆ ಠಾಣೆಗೆ ಕರೆಸಿಕೊಂಡು ನಿಪಿ.41 ಮತ್ತು ನಿಪಿ.42 ರಂತೆ ನೋಟೀಸು ನೀಡಿ, ಅವರಿಗೆ ಪಂಚರಾಗಿ ಸಹಕರಿಸಲು ಕೋರಿರುತ್ತೇನೆಂದು, ನಂತರ ಆರೋಪಿತರು ಗಾಂಜಾವನ್ನು ಖರೀದಿಸಿ ತಂದ ಸ್ಥಳವನ್ನು ತೋರಿಸುತ್ತೇವೆ ಎಂದು ತಿಳಿಸಿದ ಸ್ಥಳಕ್ಕೆ ಪಂಚರೊಂದಿಗೆ ತಮ್ಮ ಇಲಾಖಾ ವಾಹನದಲ್ಲಿ ಆರೋಪಿತರು, ಸಿಬ್ಬಂದಿಗಳು ಪಂಚರೊಂದಿಗೆ ಪ್ರಯಾಣ ಬೆಳೆಸಿದೆವು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 106: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿತರು ತೋರಿಸಿದ ಮಾರ್ಗದಲ್ಲಿ ಸ್ಥಳಕ್ಕೆ ಹೋಗಿದ್ದು, ಅವರು ಶಿಶುವಿನಾಳ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು ಎಂದು, ಆಗ ಸಮಯ ಸುಮಾರು ಬೆಳಿಗ್ಗೆ 10.30 ಆಗಿತ್ತು ಎಂದು, ನಂತರ ಆರೋಪಿತರು ಗಾಂಜಾವನ್ನು ಖರೀದಿಸಿದ ಸ್ಥಳವನ್ನು ತೋರಿಸಿದ್ದರೆಂದು, ಸದರಿ ಸ್ಥಳದಲ್ಲಿ ನಿಪಿ.33 ರಂತೆ ಬೆಳಿಗ್ಗೆ 10.45 ರಿಂದ 11.45 ರವರೆಗೆ ಪಂಚನಾಮೆ ಕ್ರಮ ಜರುಗಿಸಲಾಯಿತು ಎಂದು, ಆ ಸಮಯದಲ್ಲಿ ನಿಪಿ.34 ರಂತೆ ಪೋಟೋ ತೆಗೆಸಿದರೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 107: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಠಾಣೆಗೆ ಹಾಜರಾಗಿ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು ಎಂದು, ನಂತರ ಅದೇ ದಿನ ನ್ಯಾಯಾಧೀಶರ ಸಮ್ಮುಖದಲ್ಲಿ ಕಲಂ 52 ಎ(3) ರ ಎನ್.ಡಿ.ಪಿ.ಎಸ್. ರೀತ್ಯ ಇನ್‌ವೆಂಟರಿ ಮಾಡಿಸಿ, ನಿಪಿ.44 ರಂತೆ

ಸರ್ಟಿಫಿಕೇಟ್ ಪಡೆದಿರುತ್ತೇನೆಂದು, ಆ ಸಂದರ್ಭದಲ್ಲಿ ತೆಗೆದ ನಿಪಿ.25 ರಿಂದ ನಿಪಿ.30 ರಂತೆ ಫೋಟೋಗಳನ್ನು ತೆಗೆಯಲಾಯಿತು ಎಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 108: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಚಾಸಾ.17 ದ್ಯಾಮೇಶ್ ರವರು ಇನ್ ವೆಂಟರಿ ಸಂಬಂಧಪಟ್ಟಂತೆ ನಿಪಿ.31 ಎಂದು ಗುರುತಿಸಲಾದ ಕಲಂ 65 ಬಿ ಸಾಕ್ಷ್ಯ ಅಧಿನಿಯಮ ರೀತ್ಯ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆಂದು, ಸದರಿ ಫೋಟೋಗಳನ್ನು ನಿಪಿ.32 ರ ಡಿ.ವಿ.ಡಿ.ಗೆ ಅಳವಡಿಸಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 109: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಇನ್ ವೆಂಟರಿ ಮಾಡಿಕೊಂಡ ಗಾಂಜಾವನ್ನು ಪಿ.ಎಫ್. 113/2019 ರಲ್ಲಿ ಅಳವಡಿಸಿರುತ್ತೇನೆಂದು, ಅದೇ ದಿನ ಮಾನ್ಯ ಎಸ್.ಪಿ.ಯವರಿಗೆ ರೇಡ್ ಸಕ್ಸಸ್ ವರದಿಯನ್ನು ಕಳುಹಿಸಿಕೊಟ್ಟಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 110: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 30.12.2019 ರಂದು ಇನ್ ವೆಂಟರಿಯಿಂದ ತೆಗೆದ ಗಾಂಜಾವನ್ನು ಎಫ್.ಎಸ್.ಎಲ್. ಬೆಂಗಳೂರಿಗೆ ಕಳುಹಿಸಿಕೊಟ್ಟು ಅವರಿಂದ ನಿಪಿ.46 ರಂತೆ ಸ್ವೀಕೃತಿಯನ್ನು ಪಡೆದಿರುತ್ತೇನೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 111: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಸಾಕ್ಷಿದಾರರಾದ ಚಾಸಾ.9 ನಾಗರಾಜ, ಚಾಸಾ.10 ಮಂಜುನಾಥ, ಚಾಸಾ.11 ಲೊಹಿತ್, ಚಾಸಾ.12 ನಾಗರಾಜ, ಚಾಸಾ.13 ಕೊಟ್ರೇಶ್, ಚಾಸಾ.14 ರವಿ, ಚಾಸಾ.15 ದ್ಯಾಮೇಶ್ ಮತ್ತು ಚಾಸಾ.16 ದೇವರಾಜ ರವರ ಹೇಳಿಕೆಗಳನ್ನು ಪಡೆದಿರುತ್ತೇನೆಂದು, ದಿನಾಂಕ 16.03.2020 ರಂದು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಅನುಮತಿ ಪಡೆದು ಸದರಿ ಗಾಂಜಾವನ್ನು ನಾಶಪಡಿಸಲು ಕಮಿಟಿ ಕಳುಹಿಸಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 112: ಫ್ರಾಸಾ-10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 21.09.2020 ರಂದು ಎಫ್.ಎಸ್.ಎಲ್. ವರದಿಯನ್ನು ನಿಪಿ.23 ರಂತೆ ಹಾಗೂ ಮಾದರಿ ಸೀಲನ್ನು ನಿಪಿ.24 ರಂತೆ ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆಂದು, ತನಿಖೆಯನ್ನು ಪೂರೈಸಿ, ಆರೋಪ ದೃಢಪಟ್ಟಿದ್ದರಿಂದ ಆರೋಪಿತರ ವಿರುದ್ಧ ದಿನಾಂಕ 03.10.2020 ರಂದು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆಂದು, ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 113: ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ಏನಾದರೂ ಹೇಳಲು ಇಚ್ಚಿಸುವಿರಾ?

ಉತ್ತರಃ

ಪ್ರಶ್ನೆ 114: ನಿಮ್ಮ ಪರವಾಗಿ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡುತ್ತೀರಾ ಅಥವಾ ಯಾವುದಾದರೂ ದಾಖಲಾತಿಗಳನ್ನು ಹಾಜರು ಪಡಿಸುತ್ತೀರಾ?

ಉತ್ತರಃ

(ದಿನಾಂಕ 2 ನೇ ದಿವಸ ಡಿಸೆಂಬರ್ ಮಾಹೆಯ 2024 ರಂದು ಕೋರ್ಟ್ ಕೋ- ಆರ್ಡಿನೇಟರ್ ಆರೋಪಿಗೆ ಓದಿ ಹೇಳಿ ಆತನು ನೀಡಿದ ಉತ್ತರವನ್ನು ದಾಖಲುಮಾಡಿರುತ್ತಾರೆ.)

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**NOTE:**

In this case, there are three accused persons. Statement U/S.313 Cr.P.C., is get ready by the Court which runs into 40 pages. Due to paucity of time for recording statement of accused, to save the court time, court co-ordinator is appointed with the consent of learned counsel for accused. Sri Vadiraja Bhat Y, KAR/2071/2011 Advocate, is appointed as Court Co-ordinator.

(ದಿನಾಂಕ 2 ನೇ ದಿವಸ ಡಿಸೆಂಬರ್ ಮಾಹೆಯ 2024 ರಂದು ಸದರಿ ಸಾಕ್ಷ್ಯವನ್ನು ಆರೋಪಿತನಿಗೆ ಕೋರ್ಟ ಕೋ-ಆರ್ಡಿನೇಟರ್ ಓದಿ ಹೇಳಿ ಆತನು ನೀಡಿದ ಉತ್ತರವನ್ನು ದಾಖಲುಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸಿ, ತಮ್ಮ ಸಹಿ ಮಾಡಿರುತ್ತಾರೆ )

ವಾದಿರಾಜ ಭಟ್ ವೈ. ವಕೀಲರು,
ಕೋರ್ಟ ಕೋ-ಆರ್ಡಿನೇಟರ್ .

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

*****